ಸಂಪಾದಕರು :
ಎಂ.ಎಸ್. ವಿಕಾಸ್

ಭಾನುವಾರ, ಜುಲೈ 16, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 63 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999



## ಕೆಸರು ಗದ್ದೆಯಲ್ಲಿ ವೈದ್ಯ ವಿದ್ಯಾರ್ಥಿಗಳ ದೇಸೀ ಕ್ರೀಡೆಗಳು

ದಾವಣಗೆರೆ, ಜು. 15- ಜೆ.ಜೆ.ಎಂ. ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳ ಸಂಘವು ಶಾಮನೂರಿನ ಗಾಜಿನ ಮನೆ ಎದುರುಗಡೆ ವೀರಬಸಪ್ಪನವರ ಗದ್ದೆಯಲ್ಲಿ 76 ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ವಿವಿಧ ದೇಸೀ ಕ್ರೀಡೆಗಳ ಉತ್ಸವ ಆಯೋಜಿಸಲಾಗಿತ್ತು. ದೇಸೀ ಸೊಬಗು ಪರಿಚಯಿಸಬೇಕು ಎಂಬ ಸದುದ್ದೇಶದಿಂದ ಮಳೆಗಾಲದ ಉತ್ಸವ ಅಥವಾ ಮಾನ್ಸೂನ್ ಫಿಯೆಸ್ಟಾ ಎಂಬ ಹೆಸರಿನಡಿ ಕ್ರೀಡೆಗಳನ್ನು ನಡೆಸಲಾಯಿತು. ಕೆಸರು ಗದ್ದೆ ಓಟ, ಕೆಸರು ಗದ್ದೆ ವಾಲಿಬಾಲ್, ಕೆಸರು ಗದ್ದೆ ಥ್ರೋ ಬಾಲ್, ಹಗ್ಗ ಜಗ್ಗಾಟ ಆಯೋಜಿಸಲಾಗಿತ್ತು. ವಿದ್ಯಾರ್ಥಿ, ವಿದ್ಯಾರ್ಥಿನಿಯರು ಖುಷಿ ಖುಷಿಯಿಂದಲೇ ಪಾಲ್ಗೊಂಡಿದ್ದರು.

# 19ರಿಂದ ಗೃಹ ಲಕ್ಷ್ಮಿ ನೋಂದಣಿ

ಬೆಂಗಳೂರು, ಜು.15 - ಕುಟುಂಬದ ಮನೆಯೊಡತಿಗೆ ಮಾಸಿಕ ಎರಡು ಸಾವಿರ ನೀಡುವ ಗೃಹ ಲಕ್ಷ್ಮಿ ಯೋಜನೆಗೆ ಜುಲೈ 19 ರಿಂದ ನೋಂದಣಿ ಆರಂಭವಾಗಲಿದೆ.

ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್, ಎಪಿಎಲ್, ಬಿಪಿಎಲ್ ಪಡಿತರ ಚೀಟಿ ಕುಟುಂಬದ ಯಜಮಾನಿ ಯಾರು ಎಂದು ಗುರುತಿಸಿದವರಿಗೆ ಯೋಜನೆ ಲಭ್ಯವಾಗುತ್ತದೆ ಎಂದರು.

ಕಳೆದ ವಿಧಾನಸಭಾ ಚುನಾವಣಾ ಸಂದರ್ಭದಲ್ಲಿ ಕಾಂಗ್ರೆಸ್ ನೀಡಿದ್ದ ಐದು ಗ್ಯಾರಂಟಿಗಳಲ್ಲಿ ಈಗಾಗಲೇ ಮೂರು ಗ್ಯಾರಂಟಿಗಳನ್ನು ಅನುಷ್ಠಾನಗೊಳಿಸಲಾಗಿದ್ದು, ಗೃಹ ಲಕ್ಷ್ಮಿ ಯೋಜನೆಗೆ ಫಲಾನುಭವಿಗಳು ಈ 19 ರಿಂದ ನೋಂದಣಿ ಮಾಡಿಕೊಳ್ಳಬಹುದು ಎಂದರು.

ಆಗಸ್ಟ್ 16 ಇಲ್ಲವೇ 17 ರಿಂದ ಫಲಾನುಭವಿಗಳ ಖಾತೆಗೆ ಎರಡು ಸಾವಿರ ರೂ. ವರ್ಗಾವಣೆಯಾಗಲಿದೆ. ಈ ಯೋಜನೆ



**ಅರ್ಜಿ ಸಲ್ಲಿಕೆಗೆ ಅಂತಿಮ ಗಡುವು ಇಲ್ಲ**

**ಕುಟುಂಬದ ಯಜಮಾನಿಯ ಪತಿ ಜಿಎಸ್‌ಟಿ ಹಾಗೂ ಆದಾಯ ತೆರಿಗೆ ಪಾವತಿಸುತಿದ್ದರೆ ಯೋಜನೆ ಅಲಭ್ಯ**

ಉದ್ಘಾಟನೆಗೆ ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ನಾಯಕಿ ಸೋನಿಯಾಗಾಂಧಿ ಇಲ್ಲವೇ ಪ್ರಿಯಾಂಕಾ ಗಾಂಧಿ ಚಾಲನೆ ನೀಡುವ ಸಾಧ್ಯತೆ ಇದೆ. ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಪಕ್ಷದ ವರಿಷ್ಠರನ್ನು ಸಂಪರ್ಕ ಮಾಡಿದ್ದಾರೆ ಎಂದರು.

ಜುಲೈ 19 ರಿಂದ ಯೋಜನೆಗೆ ಫಲಾನುಭವಿಗಳು ಅರ್ಜಿ ಹಾಕುವ ದಿನ ಆರಂಭಗೊಳ್ಳಲಿದ್ದು, ಇದಕ್ಕೆ ಅಂತಿಮ ಗಡುವು ಇರುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಕುಟುಂಬದ ಯಜಮಾನಿಯ ಪತಿ ಜಿಎಸ್‌ಟಿ ಹಾಗೂ ಆದಾಯ ತೆರಿಗೆ ಪಾವತಿಸುತ್ತಿದ್ದರೆ, ಅಂತಹವರಿಗೆ ಯೋಜನೆ ಲಭ್ಯವಿರುವುದಿಲ್ಲ. ಅವರನ್ನು ಹೊರತುಪಡಿಸಿ, ಎಲ್ಲರಿಗೂ ಅವಕಾಶವಿರುತ್ತದೆ.

ಯಜಮಾನಿ ಮಹಿಳೆಗೆ ಎಸ್‌ಎಂಎಸ್ ಮೂಲಕ ನೋಂದಣಿ ದಿನ, ಸಮಯ ಮತ್ತು ಸ್ಥಳದ ವಿವರ ತಿಳಿಸಲಾಗುವುದು. ಗ್ರಾಮೀಣ ಪ್ರದೇಶದಲ್ಲಿ ಗ್ರಾಮ ಒನ್ ಕೇಂದ್ರ ಅಥವಾ ಬಾಬುಜಿ ಸೇವಾ ಕೇಂದ್ರದಲ್ಲಿ ನೋಂದಣಿಗೆ ಅವಕಾಶ ಮಾಡಲಾಗುವುದು. ಅಲ್ಲದೆ ಸರ್ಕಾರದಿಂದ ನೇಮಕಗೊಳ್ಳುವ ಪ್ರಜಾಪ್ರತಿನಿಧಿ ಮೂಲಕವೂ ನೋಂದಾಯಿಸಿ ಕೊಳ್ಳಲು ಅವಕಾಶ ಮಾಡಿಕೊಡಲಾಗಿದೆ. ಪ್ರತಿ ಫಲಾನುಭವಿಯು ನೋಂದಣಿಗೆ ನಿಗದಿ ಮಾಡಿರುವ ದಿನ, (3ನೇ ಪುಟಕ್ಕೆ)

# ವಸತಿ ಹಂಚಿಕೆ ವಿಳಂಬಕ್ಕೆ ಸಂಸದ ಸಿದ್ದೇಶ್ವರ ಅಸಮಾಧಾನ

## ಪಿಎಂ ಆವಾಸ್ ಯೋಜನೆಯಡಿ ಅರ್ಹರಿಗೆ ತಡ ಮಾಡದೆ ನಿವೇಶನ ನೀಡಲು ತಾಕೀತು

ದಾವಣಗೆರೆ, ಜು.15- ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಅರ್ಹ ಫಲಾನುಭವಿಗಳಿಗೆ ನಿವೇಶನ ಹಂಚಿಕೆ ಕಾರ್ಯ ವಿಳಂಬವಾಗುತ್ತಿದೆ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಅಧಿಕಾರಿಗಳ ಮೇಲೆ ಅಸಮಾಧಾನಗೊಂಡರು.

ಶನಿವಾರ ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ, ದಾವಣಗೆರೆ ನಗರದಲ್ಲಿ ವಸತಿ ನೀಡುವುದಾಗಿ ಹೇಳಿದ್ದರೂ ಏಕೆ ನೀಡಿಲ್ಲ? ಎಂದು ಪ್ರಶ್ನಿಸದಿರು.

ಮಹಾನಗರ ಪಾಲಿಕೆ ಆಯುಕ್ತರಾದ ರೇಣುಕಾ ಉತ್ತರಿಸುತ್ತಾ, ಫಲಾನುಭವಿಗಳ ಆಯ್ಕೆ ಸಮರ್ಪಕವಾಗಿ ನಡೆದಿಲ್ಲ ಎಂಬ ದೂರಿನ ಹಿನ್ನೆಲೆಯಲ್ಲಿ ಲೋಕಾಯುಕ್ತರು ಕಳೆದ ಜೂನ್ ತಿಂಗಳ ಕೊನೆಯ ವಾರದಲ್ಲಿ ತನಿಖೆ ನಡೆಸಿದ್ದಾರೆ. ವರದಿ ನೀಡಲು 3 ತಿಂಗಳಾಗುತ್ತದೆ ಎಂದು ಹೇಳಿದ್ದು, ವರದಿ ಬಂದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದರು.

ದಾವಣಗೆರೆ ದಕ್ಷಿಣದಲ್ಲಿ 1404 ಹಾಗೂ ಉತ್ತರದಲ್ಲಿ 966 ಫಲಾನುಭವಿ ಗಳನ್ನು ಆಯ್ಕೆ ಮಾಡಲಾಗಿದೆ. ಫಲಾನು ಭವಿಗಳಿಗೆ ಹಕ್ಕು ಪತ್ರ ನೀಡಲು ಮಾತ್ರ ಅವಕಾಶವಿದೆ. ಆದರೆ ಹಿಂದಿನ ಆಯುಕ್ತರು ನಿವೇಶನ ಮಂಜೂರಾತಿ ಪತ್ರ ನೀಡಿದ್ದಾರೆ. ಇದನ್ನು ಕೊಡಲು ಅವಕಾಶವಿ ಲ್ಲದ ಕಾರಣ ದೂರು ದಾಖಲಾಗಿದೆ ಎಂದು ಹೇಳಿದರು.

ಲೋಕಾಯುಕ್ತರು ವರದಿ ನೀಡುವ ವರೆಗೆ ಕಾಯುತ್ತಾ ಕುಳಿತರೆ ಫಲಾನುಭವಿಗಳಿಗೆ ಯೋಜನೆ ಲಾಭ ತಲುಪುವುದಿಲ್ಲ. ಪತ್ರ ಬರೆದು ಮಾಹಿತಿ ಪಡೆದು, ಶೀಘ್ರವೇ ಅರ್ಹರಿಗೆ ವಸತಿ ನೀಡುವಂತೆ ಸೂಚಿಸಿದರು. ಜಿಲ್ಲಾ ಉಸ್ತುವಾರಿ ಸಚಿವರು ಈ ಯೋಜನೆಯಡಿ ನಾವು ಹಣ ಪಡೆದಿದ್ದೇವೆ ಎಂದು ಹೇಳಿದ್ದಾರೆ. ಯಾರು ಹಣ ಪಡೆದಿದ್ದಾರೋ ತನಿಖೆ ನಡೆಸಿ. ಅವರ ಮೇಲೆ ಕ್ರಮ ಕೈಗೊಳ್ಳಿ ಎಂದೂ ಸಹ ಸಂಸದರು ಸೂಚಿಸಿದರು.

ಯೋಜನೆಯ ಕುರಿತು ಎಲ್ಲಾ ಗ್ರಾಮ ಪಂಚಾಯ್ತಿಗಳಲ್ಲೂ ಸಮಸ್ಯೆ (2ನೇ ಪುಟಕ್ಕೆ)



### ಫಸಲ್ ಭೀಮಾ: 1 ಲಕ್ಷ ನೋಂದಣಿಗೆ ಸೂಚನೆ

ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಯಡಿ ಜಿಲ್ಲಾದ್ಯಂತ ಕನಿಷ್ಠ 1 ಲಕ್ಷ ನೋಂದಣಿ ಮಾಡಿಸುವಂತೆ ಸಂಸದರು ಜಂಟಿ ಕೃಷಿ ನಿರ್ದೇಶಕ ಶ್ರೀನಿವಾಸ್ ಚಿಂತಾಲ್ ಅವರಿಗೆ ಸೂಚಿಸಿದರು.

ಪ್ರಸಕ್ತ ವರ್ಷ 16 ಸಾವಿರ ಜನ ರೈತರು ಈ ಯೋಜನೆಯಡಿ ನೋಂದಣಿ ಮಾಡಿಕೊಂಡಿದ್ದಾರೆಂದು ಜಂಟಿ ಕೃಷಿ ನಿರ್ದೇಶಕರು ಸಭೆಗೆ ತಿಳಿಸಿದರು. ಇದು ಕಡಿಮೆಯಾಗಿದ್ದು, ಸದ್ಯ ಬರಗಾಲ ಬರುವಂತಿದೆ. ಬೆಳೆ ನಷ್ಟವಾದರೆ ರೈತರಿಗೆ ಪ್ರಯೋಜನವಾಗಲಿದೆ. ಈ ಕುರಿತು ತಾಲ್ಲೂಕು ಅಧಿಕಾರಿಗಳಿಗೆ ಹೇಳಿ, ಮನೆ ಮನೆಗೆ ತೆರಳಿ ನೋಂದಣಿ ಸಂಖ್ಯೆ ಹೆಚ್ಚಿಸುವಂತೆ ಸೂಚಿಸಿದರು. ಜಲ್ಲೆಯಲ್ಲಿ ಶೇ.48ರಷ್ಟು ಬಿತ್ತನೆಯಾಗಿರುವುದಾಗಿ ಇದೇ ವೇಳೆ ಚಿಂತಾಲ್ ಮಾಹಿತಿ ನೀಡಿದರು.

### ಸಮುದಾಯ ಶೌಚಾಲಯ ಹೆಚ್ಚಿನ ಅನುದಾನಕ್ಕೆ ಕ್ರಮ

**ಸ್ವಚ್ಛ ಭಾರತ್ ಮಿಷನ್ ಯೋನೆಯಡಿ ಸಮುದಾಯ ಶೌಚಾಲಯಗಳ ನಿರ್ಮಾಣಕ್ಕೆ ನೀಡುವ ಅನುದಾನ ವನ್ನು ಹೆಚ್ಚಿಸುವ ಕುರಿತು ಲೋಕಸಭೆ ಯಲ್ಲಿ ಹಾಗೂ ಸಂಬಂಧಿಸಿದ ಸಚಿವರ ಬಳಿ ಚರ್ಚೆ ನಡೆಸುವುದಾಗಿ ಸಂಸದ ಸಿದ್ದೇಶ್ವರ ಹೇಳಿದರು. ಇದೇ ವೇಳೆ ಸಮುದಾಯ ಶೌಚಾಲಯಗಳಿಗೆ ಸಮರ್ಪಕ ನೀರಿನ ಸೌಲಭ್ಯ ಕಲ್ಪಿಸು ವಂತೆಯೂ, ಬೀಗ ಹಾಕುವ ವ್ಯವಸ್ಥೆ ಮಾಡುವಂತೆಯೂ ಸೂಚಿಸಿದರು.**

## ಚಂದ್ರಯಾನ ಕಕ್ಷೆ ಎತ್ತರಿಸುವ ಪ್ರಕ್ರಿಯೆ ಪೂರ್ಣ

ಚೆನ್ನೈ, ಜು. 15 - ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ವಿಜ್ಞಾನಿಗಳು ಚಂದ್ರಯಾನ - 3ರ ಮೊದಲ ಕಕ್ಷೆ ಎತ್ತರಿಸುವ ಕಸರತ್ತು ಯಶಸ್ವಿಯಾಗಿ ಪೂರ್ಣಗೊಳಿಸಿದ್ದಾರೆ.

ಉಪಗ್ರಹದ ಆರೋಗ್ಯ ಸಾಮಾನ್ಯವಾಗಿದೆ. ಚಂದ್ರಯಾನವು ಈಗ 173 - 41,762 ಕಿ.ಮೀ.ಗಳ ಕಕ್ಷೆಯಲ್ಲಿದೆ ಎಂದು ಇಸ್ರೋ ತಿಳಿಸಿದೆ. ಇಂತಹ ಹಲವಾರು ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿದ ನಂತರ ಚಂದ್ರಯಾನವು ಚಂದ್ರನ ದಕ್ಷಿಣ ಧ್ರುವವನ್ನು ತಲುಪಲಿದೆ.

## ಚಂದ್ರಯಾನದಿಂದಾಗಿ ಗಗನ ಯಾನಕ್ಕೆ ಉತ್ತೇಜನ

ಶ್ರೀಹರಿಕೋಟ, ಜು. 15 - ಇಸ್ರೋ ಎಲ್.ವಿ.ಎಂ.3 - ಎಂ4 ರಾಕೆಟ್ ಮೂಲಕ ಚಂದ್ರಯಾನ 3 ಉಡಾವಣೆಯಲ್ಲಿ ಯಶಸ್ಸು ಕಂಡಿರುವುದು ದೇಶದ ಮೊದಲ ಮಾನವ ಸಹಿತ ಗಗನ ಯಾನಕ್ಕೆ ಉತ್ತೇಜನ ನೀಡಿದೆ. ಇದೇ ರಾಕೆಟ್ ಅನ್ನು ಮಾನವ ದರ್ಜೆಯಲ್ಲಿ ರೂಪಿಸುವ ಮೂಲಕ ಗಗನ ಯಾತ್ರೆ ಕೈಗೊಳ್ಳಲಾಗುವುದು. ಮೂವರು ಗಗನ ಯಾತ್ರಿಗಳನ್ನು ಮೂರು (3ನೇ ಪುಟಕ್ಕೆ)

**ಮುಂದಿನ ವರ್ಷದ ಅಂತ್ಯದ ವೇಳೆಗೆ ಮಾನವ ರಹಿತ ಗಗನಯಾನ ಕೈಗೊಳ್ಳಲು ಇಸ್ರೋ ಉದ್ದೇಶಿಸಿದ್ದು, ಪರೀಕ್ಷಾ ವಾಹನ ಸಿದ್ಧವಾಗಿದೆ.**

ಬೆಂಗಳೂರಿನ ಪ್ರಖ್ಯಾತ ಮೂಳೆ ಮತ್ತು ಕೀಲು ರೋಗ ಶಸ್ತ್ರಚಿಕಿತ್ಸಾ ತಜ್ಞರು ಬುಧವಾರ ಜುಲೈ 19 ರಂದು ನಿಮ್ಮ ದಾವಣಗೆರೆ ಮತ್ತು ಹುಬ್ಬಳಿ ನಗರಕ್ಕೆ ಭೇಟಿ ನೀಡುತ್ತಾರೆ

ಡಾ ಬಸವರಾಜ ಸಿ ಎಂ
ಹಿರಿಯ ಸಲಹೆಗಾರರು – ಆರ್ಥೋಪೆಡಿಕ್ ಸರ್ಜರಿ
MBBS, D'Ortho, DNB (Ortho), MRCS (ಗ್ಲ್ಯಾಸ್ಗೋ),
FRCS (ಆಘಾತ ಮತ್ತು ಆರ್ಥೋ), ಆರ್ತ್ರೋಪ್ಲ್ಯಾಸ್ಟಿ ಫೆಲೋಶಿಪ್ (UK)

ಪರಿಣಿತರು: ಕೃತಕ ಕೀಲು ಜೋಡಣೆ (Revision Joint replacement)

ಬೆಳಗ್ಗೆ 10.30 ರಿಂದ ಮಧ್ಯಾಹ್ನ 12 ರವರೆಗೆ
ಯೂನಿಟಿ ಹೆಲ್ತ್ ಕೇರ್, ಜೈನ್ ವಿದ್ಯಾಲಯ ಎದುರು, 5 ನೇ ಕ್ರಾಸ್, ಪಿ ಜೆ ವಿಸ್ತರಣೆ, ದಾವಣಗೆರೆ.


ಮಧ್ಯಾಹ್ನ 3.30 ರಿಂದ ರಾತ್ರಿ 7 ರವರೆಗೆ
ಸಿಟಿ ಕ್ಲಿನಿಕ್, ಮಾಧವಪುರ, ಜನತಾ ಬಜಾರ್ ಹತ್ತಿರ, ದಾಜಿಬಾನ್ ಪೇಠ್ ರಸ್ತೆ, ಹುಬ್ಬಳ್ಳಿ.

ನೋಂದಣಿಗಾಗಿ, ಕರೆ ಮಾಡಿ
(+91) 9341177007 / 9916821655 / 99025 33720

BGS Gleneagles Global Hospital
KENGERI, BENGALURU



## ಚಂದ್ರಯಾನ: ವಿಜ್ಞಾನಿಗಳಿಂದ ಪೂಜೆ ಸಲ್ಲಿಕೆ ವಿಪರ್ಯಾಸ



ಸಾಣೇಹಳ್ಳಿ, ಜು. 15- ಚಂದ್ರಯಾನ ಉಪಗ್ರಹದ ಉಡಾವಣೆ ನಿರ್ವಿಘ್ನವಾಗಿ ನಡೆಯಲು ವಿಜ್ಞಾನಿಗಳು ತಿರುಪತಿ ತಿಮ್ಮಪ್ಪನಿಗೆ ಪೂಜೆ ಸಲ್ಲಿಸಿದ್ದು ವಿಪರ್ಯಾಸದ ಸಂಗತಿ ಎಂದು ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಅಸಮಾಧಾನ ವ್ಯಕ್ತಪಡಿಸಿದರು.

ಇಲ್ಲಿನ ಶ್ರೀ ಶಿವಕುಮಾರ ರಂಗಮಂದಿರದಲ್ಲಿ ಶ್ರೀ ಶಿವಕುಮಾರ ಹಿರಿಯ ಪ್ರಾಥಮಿಕ ಶಾಲೆಯು ಆಯೋಜಿಸಿದ್ದ 'ತರಳಬಾಳು ಗುರು ಪರಂಪರೆ' ಕುರಿತ 'ದಂದಣ ದತ್ತಣ ಗೋಷ್ಠಿ'ಯ ಸಾನ್ನಿಧ್ಯ ವಹಿಸಿದ್ದ ಸ್ವಾಮೀಜಿ ಮಾತನಾಡಿ, ಚಂದ್ರಯಾನ ಯಶಸ್ವಿಯಾಗಿ ನಡೆಯಲಿ ಎಂದು ಹೀಗೆ ಮೌಢ್ಯ ಮರೆದದ್ದು ಸರಿಯಲ್ಲ ಎಂದು ಹೇಳಿದರು.

ಕರ್ನಾಟಕದಲ್ಲಿ ಅನೇಕ ಮಠ ಪೀಠಗಳಿದ್ದರೂ ತರಳಬಾಳು ಶ್ರೀಮಠಕ್ಕೆ ತನ್ನದೇ ಆದ ವಿಶಿಷ್ಟವಾದ ಸ್ಥಾನಮಾನವಿದೆ. ಇದಕ್ಕೆ ಕಾರಣ ಈ ಮಠ ಜನರ ನಡುವೆ ಬೆಳೆದು ಬಂದದ್ದು. ಮಠದ ಮೂಲ ಪುರುಷ ಮರುಳಸಿದ್ಧರು ತಮ್ಮ ಸಾಮಾಜಿಕ ಕಳಕಳಿ, ಸಾರ್ವಜನಿಕ ಹಿತಾಸಕ್ತಿ, ಬೌದ್ಧಿಕ ಚಿಂತನೆಗಳ ಮೂಲಕ 'ವಿಶ್ವಬಂಧು' ಎನ್ನುವ ಗೌರವಕ್ಕೆ ಪಾತ್ರರಾದರು. ಅವರು ಅಜ್ಞಾನ, ಮೌಢ್ಯತೆ, ಜಾತೀ ಯತೆಯ ವಿರುದ್ಧ (3ನೇ ಪುಟಕ್ಕೆ)

## ಫೆಬ್ರವರಿ ವೇಳೆಗೆ ಹೆದ್ದಾರಿ ಕಾಮಗಾರಿ ಪೂರ್ಣಗೊಳಿಸಿ



ದಾವಣಗೆರೆ, ಜು. 15- ಆರು ಪಥದ ರಾಷ್ಟ್ರೀಯ ಹೆದ್ದಾರಿ ನಿರ್ಮಾಣದಲ್ಲಿ ಚಿತ್ರದುರ್ಗ-ದಾವಣಗೆರೆ ಹಾಗೂ ದಾವಣಗೆರೆ-ಹಾವೇರಿ ನಡುವಿನ ಎರಡೂ ಪ್ಯಾಕೇಜ್‌ಗಳಲ್ಲಿ ದಾವಣಗೆರೆ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬಾಕಿ ಇರುವ ಎಲ್ಲಾ ಕಾಮಗಾರಿಗಳನ್ನು ಫೆಬ್ರವರಿ ವೇಳೆಗೆ ಸಂಪೂರ್ಣವಾಗಿ ಪೂರ್ಣಗೊಳಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕು ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಹೇಳಿದರು.


ನಗರದ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಇಂದು ಸಂಜೆ ನಡೆದ ರಾಷ್ಟ್ರೀಯ ಹೆದ್ದಾರಿ ಯೋಜನೆಯ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದರು.

ದಾವಣಗೆರೆಯಿಂದ ಕುಮಾರಪಟ್ಟಣಂವರೆಗೆ ಸುಮಾರು 8 ಕಿ.ಮೀನಷ್ಟು ಸರ್ವೀಸ್ ರಸ್ತೆ ಮಾಡುವುದು ಬಾಕಿಯಿದ್ದು, ಸಾಕಷ್ಟು ಅನಾನುಕೂಲವಾಗಿದೆ ಎಂದರು. ಅಪಘಾತಗಳ ಸಂಖ್ಯೆಯೂ ಕೂಡ ಗಣನೀಯ ಪ್ರಮಾಣದಲ್ಲಿ ಏರಿಕೆಯಾಗಿದೆ. ಇದಕ್ಕೆ ಹೆದ್ದಾರಿ ಕಾಮಗಾರಿ ಪೂರ್ಣಗೊಳ್ಳದೇ ಇರುವುದು ಕಾರಣವಾಗಿದೆ ಎಂದು ಸಭೆಯಲ್ಲಿ ಉಪಸ್ಥಿತರಿದ್ದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ರೀಜನಲ್ ಆಫೀಸರ್ (4ನೇ ಪುಟಕ್ಕೆ)

## ಸಿಯುಇಟಿ ಪರೀಕ್ಷೆ 22 ಸಾವಿರಕ್ಕೂ ಹೆಚ್ಚು 100 ಪರ್ಸೆಂಟೈಲ್

ನವದೆಹಲಿ, ಜು. 15 - ವಿಶ್ವವಿದ್ಯಾನಿಲಯಗಳ ಪ್ರವೇಶಕ್ಕೆ ನಡೆಸಲಾಗುವ ಸಿಯುಇಟಿ - ಯು.ಜಿ. ಪರೀಕ್ಷೆಯಲ್ಲಿ 22 ಸಾವಿರಕ್ಕೂ ಹೆಚ್ಚು ಅಭ್ಯರ್ಥಿಗಳು (3ನೇ ಪುಟಕ್ಕೆ)

## ಗುಜ್ಜರ್ ಶಿವಶಂಕರ್‌ರಾವ್ ನಿಧನ



ದಾವಣಗೆರೆ ಕೆ.ಬಿ. ಬಡಾವಣೆ ಲಾಯರ್ ರಸ್ತೆ ವಾಸಿ, ಚಾಮರಾಜಪೇಟೆಯ ಶ್ರೀ ಚೈತನ್ಯ ಟೆಕ್ಸ್‌ಟೈಲ್ಸ್ ಮಾಲೀಕರಾದ **ಶ್ರೀ ಗುಜ್ಜರ್ ಶಿವಶಂಕರ್‌ರಾವ್** ಅವರು ದಿನಾಂಕ 15.7.2023ರ ಶನಿವಾರ ಸಂಜೆ 7 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 90 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 16.7.2023ರ ಭಾನುವಾರ ಮಧ್ಯಾಹ್ನ 12 ಕ್ಕೆ ನಗರದ ಪಿ.ಬಿ ರಸ್ತೆಯ ವೈಕುಂಠಧಾಮದಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**
**ಮೊ : 94498 02288**

ನಮ್ಮಲ್ಲಿ ಹಳೆಯ ಮರದ ಚಿತ್ರಳ್ಳಿ ಗೋಟಿನ ಉತ್ತಮ ತಳಿಯ 2 ಕೆ.ಜಿ. ಪ್ಯಾಕೇಟ್‌ನ ಅಡಿಕೆ ಸಸಿಗಳು ದೊರೆಯುತ್ತವೆ



ಸಂಪರ್ಕಿಸಿ.
ಸಿದ್ದೇಶ, ಬೆಳ್ಳೂಡಿ, ಹರಿಹರ ತಾಲ್ಲೂಕು.
63625 71156, 79758 21241



ಮಹಾನಗರ ಪಾಲಿಕೆ, ದಾವಣಗೆರೆ
2021-22ನೇ ಸಾಲಿನ 15ನೇ ಹಣಕಾಸು ಆಯೋಗ ಅನುದಾನದಡಿ ಮಂಜೂರಾಗಿರುವ ಅಂದಾಜು ರೂ. 50 ಲಕ್ಷಗಳ ಕಾಮಗಾರಿಯ
ಭೂಮಿ ಪೂಜೆ ಸಮಾರಂಭ

ದಾವಣಗೆರೆ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಪೌರ ಕಾರ್ಮಿಕರುಗಳಿಗೆ ಅತ್ಯಾಧುನಿಕ ವಿಶ್ರಾಂತಿ ಗೃಹ ನಿರ್ಮಿಸುವ ಕಾಮಗಾರಿ
(ವಾರ್ಡ್ ನಂ.17, ದಾವಣಗೆರೆ ಒನ್ ಹತ್ತಿರ ಮತ್ತು ವಾರ್ಡ್ ನಂ.39 ವಿದ್ಯಾನಗರ 3ನೇ ಮುಖ್ಯರಸ್ತೆ)

ದಿನಾಂಕ : 16-7-2023 ರ ಭಾನುವಾರ
ಸಮಯ : 01-30 ಗಂಟೆಗೆ
ಸ್ಥಳ : ದಾವಣಗೆರೆ ಒನ್ ಮುಂಭಾಗ, ಪಿ.ಜೆ. ಬಡಾವಣೆ, ದಾವಣಗೆರೆ.

ಅಧ್ಯಕ್ಷತೆ ಮತ್ತು ಭೂಮಿಪೂಜೆ ನೆರವೇರಿಸುವವರು :
ಸನ್ಮಾನ್ಯ ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್
ಶಾಸಕರು, ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರ
ಹಾಗು ತೋಟಗಾರಿಕೆ ಹಾಗು ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಸಚಿವರು
ಹಾಗು ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ.

ಈ ಕಾಮಗಾರಿ ಭೂಮಿ ಪೂಜೆಗೆ ಆಗಮಿಸುತ್ತಿರುವ ಮಹಾಪೌರರು, ಆಯುಕ್ತರು, ಕಾಂಗ್ರೆಸ್ ಪಕ್ಷದ ಎಲ್ಲಾ ಸದಸ್ಯರುಗಳಿಗೂ, ಮುಖಂಡರುಗಳಿಗೂ, ಕಾರ್ಯಕರ್ತರಿಗೂ, ಅಭಿಮಾನಿಗಳಿಗೂ, ಪೌರ ಕಾರ್ಮಿಕರ ಸಂಘದ ಅಧ್ಯಕ್ಷರು ಮತ್ತು ಪದಾಧಿಕಾರಿಗಳಿಗೆ ಹಾಗು ಪೌರ ಕಾರ್ಮಿಕರಿಗೆ
ಹೃದಯಪೂರ್ವಕ ಸ್ವಾಗತ ಸುಸ್ವಾಗತ
ಸ್ವಾಗತ ಕೋರುವವರು : ವಾರ್ಡ್ ನಂ.17 ಮತ್ತು 39ರ ಸಮಸ್ತ ನಾಗರೀಕರು



# ಸಂವಿಧಾನ ಓದಿದರೆ ಸಾಲದು, ಅರ್ಥೈಸಿಕೊಂಡು ಅನುಸರಿಸಬೇಕು



## ರಾಜ್ಯಮಟ್ಟದ ಅಧ್ಯಯನ ಶಿಬಿರದಲ್ಲಿ ನ್ಯಾ. ನಾಗಮೋಹನ್‌ದಾಸ್ ಕರೆ

ಮಲೇಬೆನ್ನೂರು, ಜು.15- ಸಂವಿಧಾನವನ್ನು ಓದಿದರೆ ಸಾಲದು, ಅದನ್ನು ಅರ್ಥ ಮಾಡಿಕೊಳ್ಳಬೇಕು. ಹಾಗೆಯೇ ಅನುಸರಿಸಬೇಕೆಂದು ರಾಜ್ಯ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್. ನಾಗಮೋಹನ್‌ದಾಸ್ ಹೇಳಿದರು.

ಹನಗವಾಡಿ ಸಮೀಪ ಬೈಪಾಸ್‌ನಲ್ಲಿರುವ ಪ್ರೊ. ಬಿ. ಕೃಷ್ಣಪ್ಪ ಭವನದಲ್ಲಿ ಮಾನವ ಬಂಧುತ್ವ ವೇದಿಕೆಯ ಅಂಗ ವೇದಿಕೆಯಾದ ವಿದ್ಯಾರ್ಥಿ ಬಂಧುತ್ವ ವೇದಿಕೆ ವತಿಯಿಂದ ಇಂದು ಹಮ್ಮಿಕೊಂಡಿದ್ದ ವೈಜ್ಞಾನಿಕ ಮತ್ತು ಸಹಬಾಳ್ವೆಯ ಶಿಕ್ಷಣ ಬಲಪಡಿಸುವ ರಾಜ್ಯ ಮಟ್ಟದ ಅಧ್ಯಯನ ಶಿಬಿರವನ್ನು ಸಂವಿಧಾನದ ಪೀಠಿಕೆ ಓದುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ನಮ್ಮ ದೇಶದಲ್ಲಿ ಸಂವಿಧಾನ ಜಾರಿಗೆ ಬಂದು 73 ವರ್ಷಗಳಾಗಿವೆ. ಎಷ್ಟು ಜನ ಸಂವಿಧಾನವನ್ನು ಓದಿ, ಅದರಂತೆ ನಡೆದುಕೊಂಡಿದ್ದಾರೆ ಎಂದು ಪ್ರಶ್ನಿಸಿದ ನಾಗಮೋಹನ್‌ದಾಸ್ ಅವರು, ನಮ್ಮ ದೇಶದಲ್ಲಿ ಅಷ್ಟೇ ಅಲ್ಲ, ಇಡೀ ಜಗತ್ತಿನ ಜನ ಆಯಾ ದೇಶದ ಸಂವಿಧಾನದ ಆಶಯದಂತೆ ಆಡಳಿತವನ್ನು ಬಯಸುತ್ತಿದ್ದಾರೆ. ಅದರಂತೆ ಆಡಳಿತ ನೀಡುವ ಅಧಿಕಾರ ನಮ್ಮನ್ನಾಳುವವರ ಕೈಯ್ಯಲ್ಲಿದೆ ಎಂದರು.

ಸಂವಿಧಾನ ಕೇವಲ ಪುಸ್ತಕವಲ್ಲ. ಅದು ತ್ಯಾಗ, ಬಲಿದಾನಗಳ ರೂಪಕವಾಗಿದೆ. ಭಾರತ ದೇಶವನ್ನು ತಿಳಿಯದೆ, ಭಾರತದ ಸಂವಿಧಾನವನ್ನು ತಿಳಿಯಲು ಸಾಧ್ಯವಿಲ್ಲ. ನಮ್ಮ ದೇಶವನ್ನು ತಿಳಿದುಕೊಳ್ಳಬೇಕೆಂದರೆ ದೇಶದ ಇತಿಹಾಸ, ಜನರ ಮೂಲ ಧರ್ಮಗಳು, ಜಾತಿಗಳು-ಉಪಜಾತಿಗಳು, ಆರ್ಥಿಕ ಸಂಬಂಧಗಳು, ಸಾಮಾಜಿಕ ಸಂಬಂಧಗಳು, ಮೌಲ್ಯಗಳು, ಸಂಸ್ಕೃತಿ-ಉಪಸಂಸ್ಕೃತಿ ಮತ್ತು ಭಾಷೆಗಳ ಬಗ್ಗೆ ತಿಳಿದುಕೊಳ್ಳಬೇಕೆಂದರು.

ಇಂದು ಭಾರತದಲ್ಲಿ 4635 ಜನಾಂಗಗಳು, 325 ಭಾಷೆಗಳು ಮತ್ತು 25 ಲಿಪಿಗಳೊಂದಿಗೆ ಜನ ಸಹಜೀವನ ನಡೆಸುತ್ತಿದ್ದಾರೆ. ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ ಎಲ್ಲಾ ಜನರು ಭಾರತದ ವೈವಿಧ್ಯತೆ ಮತ್ತು ಏಕತೆಗಳನ್ನು ರೂಪಿಸಿದ್ದಾರೆ. ಹಾಗಾಗಿಯೇ ಭಾರತ ಬಹುತ್ವದ ದೇಶವಾಗಿದೆ ಎಂದು ನಾಗಮೋಹನ್‌ದಾಸ್ ಹೇಳಿದರು.

ಭಾರತದಲ್ಲಿ 6.50 ಲಕ್ಷ ಹಳ್ಳಿಗಳಿದ್ದು, ನಮ್ಮ ಹಳ್ಳಿಯ ಜನರು ಸ್ವಾಭಿಮಾನದಿಂದ ಸ್ವಾವಲಂಬಿಗಳಾಗಿ ಬದುಕುತ್ತಿದ್ದಾರೆ. ಆದರೆ ಖಾಸಗೀಕರಣದಿಂದಾಗಿ ದೇಶದ ಜನ ನಲುಗಿಹೋಗುವಂತಹ ಪರಿಸ್ಥಿತಿ ನಿರ್ಮಾಣವಾಗಿರುವುದಕ್ಕೆ ತೀವ್ರ ಬೇಸರ ವ್ಯಕ್ತಪಡಿಸಿದ ಅವರು, ಇವತ್ತು ನಮ್ಮ ದೇಶ ಸಾಧನೆ ಮಾಡಿದ್ದರೆ, ಅದಕ್ಕೆ ಪ್ರಮುಖ ಕಾರಣ ನಮ್ಮ ಸಂವಿಧಾನವೇ ಆಗಿದೆ.


ದೇಶದ ಜಾತಿ - ಉಪಜಾತಿಗಳಲ್ಲಿ ಅಸಮಾನತೆ ಇದ್ದರೂ, ನಮ್ಮ ಸಂವಿಧಾನದಿಂದಾಗಿ ಹಿಂದುಳಿದ ವರ್ಗದ ನರೇಂದ್ರ ಮೋದಿ ಅವರು ಪ್ರಧಾನಿಗಳಾಗಿ ಮತ್ತು ಬುಡಕಟ್ಟು ಜನಾಂಗದ ದ್ರೌಪದಿ ಮುರ್ಮು ರಾಷ್ಟ್ರಪತಿಗಳಾಗಿ ಹಾಗೂ ರೈತನ ಮಗನಾದ ನಾನು ಹೈಕೋರ್ಟ್ ನ್ಯಾಯಮೂರ್ತಿಯಾಗಿ ಕೆಲಸ ಮಾಡಲು ಸಾಧ್ಯವಾಗಿದೆ. ಇವತ್ತು ನಮಗೆ ನಮ್ಮ ಸಂವಿಧಾನ ಮಾರ್ಗವೇ ಸರಿಯಾದ ಮಾರ್ಗವಾಗಿದ್ದು, ಈ ನಿಟ್ಟಿನಲ್ಲಿ ನಾವೆಲ್ಲರೂ ಹೆಜ್ಜೆ ಹಾಕೋಣ ಎಂದು ನಾಗಮೋಹನ್‌ದಾಸ್ ಹೇಳಿದರು.

ನಮ್ಮ ದೇಶದ ಶಿಕ್ಷಣ ವ್ಯವಸ್ಥೆ ಬದಲಾಗಬೇಕು. ಸಮಾನ ಹಾಗೂ ಗುಣಾತ್ಮಕ ಶಿಕ್ಷಣದ ಕೊರತೆ ಎದ್ದು ಕಾಣುತ್ತಿದೆ. ಸರ್ಕಾರಗಳು ಈ ನಿಟ್ಟಿನಲ್ಲಿ ಗಮನಹರಿಸಬೇಕೆಂದು ಅವರು ಆಗ್ರಹಿಸಿದರು.

ಪ್ರೊ. ಬಿ. ಕೃಷ್ಣಪ್ಪ ಭವನದ ಟ್ರಸ್ಟಿ ಹನಗವಾಡಿ ರುದ್ರಪ್ಪ ಮಾತನಾಡಿದರು.

ಮಾನವ ಬಂಧುತ್ವ ವೇದಿಕೆಯ ರಾಜ್ಯ ಸಂಚಾಲಕ ಡಾ. ಎ.ಬಿ. ರಾಮಚಂದ್ರಪ್ಪ, ವಿಭಾಗೀಯ ಸಂಚಾಲಕರಾದ ಅನಂತ್‌ನಾಯ್ಕ, ವಿದ್ಯಾರ್ಥಿ ಬಂಧುತ್ವ ವೇದಿಕೆಯ ಆರತಿ ಶಹಪೂರ್, ಹಿರಿಯ ವಕೀಲರಾದ ಜಯದೇವನಾಯ್ಕ, ಅನಿಷ್ ಪಾಷಾ, ಬಂಡಾಯ ಸಾಹಿತಿ ಜೆ. ಕಲೀಂ ಭಾಷಾ ವೇದಿಕೆಯ ಮಾಡಾಳ್ ಶಿವಕುಮಾರ್, ರಾಘು ದೊಡ್ಮನಿ, ಸಂತೋಷ್ ನೋಟಗಾರ್, ಉಕ್ಕಡಗಾತ್ರಿ ಮಂಜು, ಸಾಬೀರ್ ಅಲಿ, ಪಾರ್ವತಿ, ಪತ್ರಕರ್ತ ಜಿಗಳಿ ಪ್ರಕಾಶ್, ಕುಂಬಳೂರು ವಾಸು, ಭೋವಿ ಕುಮಾರ್, ಚನ್ನಗಿರಿ ತಾ. ಕಸಾಪ ಅಧ್ಯಕ್ಷ ಎಲ್.ಜಿ. ಮಧುಕುಮಾರ್, ನಿಟುವಳ್ಳಿಯ ಕರಿಯಪ್ಪ ಸೇರಿದಂತೆ ಇತರರು ಶಿಬಿರದಲ್ಲಿ ಪಾಲ್ಗೊಂಡಿದ್ದರು. ಭಾನುವಾರವೂ ಶಿಬಿರ ನಡೆಯಲಿದೆ.

# ರಫೇಲ್ ಒಪ್ಪಂದದ ಕಾರಣ ಪ್ರಧಾನಿಗೆ ಫ್ರಾನ್ಸ್ ಪರೇಡ್



ನವದೆಹಲಿ, ಜು. 15 - ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ರಫೇಲ್ ಒಪ್ಪಂದ ಮಾಡಿಕೊಂಡ ಕಾರಣ ಅವರಿಗೆ ಫ್ರಾನ್ಸ್‌ನಲ್ಲಿ ಬ್ಯಾಸ್ಟೈಲ್ ದಿನದ ಪರೇಡ್ ಅವಕಾಶ ದೊರೆತಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆರೋಪಿಸಿದ್ದಾರೆ.

ಮಣಿಪುರ ಉರಿಯುತ್ತಿದೆ. ಯುರೋಪ್ ಒಕ್ಕೂಟದ ಸಂಸತ್ತು ಭಾರತದ ಆಂತರಿಕ ವಿಷಯದ ಕುರಿತು ಚರ್ಚೆ ನಡೆಸುತ್ತಿದೆ. ಪ್ರಧಾನ ಮಂತ್ರಿ ಈ ಬಗ್ಗೆ ಒಂದೂ ಮಾತನಾಡಿಲ್ಲ. ಈ ನಡುವೆ, ರಫೇಲ್ ಕಾರಣದಿಂದಾಗಿ ಅವರಿಗೆ ಬ್ಯಾಸ್ಟೈಲ್ ದಿನದ ಪರೇಡ್ ಅವಕಾಶ ಸಿಕ್ಕಿದೆ ಎಂದು ರಾಹುಲ್ ಗಾಂಧಿ ಹೇಳಿದ್ದಾರೆ.

ರಾಹುಲ್ ಹೇಳಿಕೆಯನ್ನು ತರಾಟೆಗೆ ತೆಗೆದುಕೊಂಡಿರುವ ಕೇಂದ್ರ ಸಚಿವೆ ಸ್ಮೃತಿ ಇರಾನಿ, ಭಾರತದ ಆಂತರಿಕ ವಿಷಯಗಳಲ್ಲಿ ವಿದೇಶಿ ಮಧ್ಯ ಪ್ರವೇಶಕ್ಕೆ ಆಹ್ವಾನ ನೀಡುವ ವ್ಯಕ್ತಿಯೊಬ್ಬರು ನಮ್ಮ ಪ್ರಧಾನ ಮಂತ್ರಿಗೆ ರಾಷ್ಟ್ರೀಯ ಗೌರವ ದೊರೆತಿದ್ದನ್ನು ಅಣಕಿಸುತ್ತಿದ್ದಾರೆ ಎಂದಿದ್ದಾರೆ.

ರಾಹುಲ್ ಗಾಂಧಿ ಜನರಿಂದ ತಿರಸ್ಕೃತಗೊಂಡಿದ್ದಾರೆ. ರಕ್ಷಣಾ ಒಪ್ಪಂದಗಳು ವಂಶದ ಮನೆ ಬಾಗಿಲಿಗೆ ಬರುವುದು ನಿಂತಿರುವ ಕಾರಣ ಆಕ್ರೋಶಗೊಂಡಿದ್ದಾರೆ ಎಂದೂ ಅವರು ಹೇಳಿದ್ದಾರೆ.

ಎರಡು ದಿನಗಳ ಫ್ರಾನ್ಸ್ ಭೇಟಿಯಲ್ಲಿದ್ದ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಬ್ಯಾಸ್ಟೈಲ್ ದಿನದ ಪರೇಡ್‌ನ ಮುಖ್ಯ ಅತಿಥಿಯಾಗಿದ್ದರು. ಅವರಿಗೆ ಇದೇ ಸಂದರ್ಭದಲ್ಲಿ ಫ್ರಾನ್ಸ್‌ನ ಅತ್ಯುನ್ನತ ನಾಗರಿಕ ಹಾಗೂ ಸೈನಿಕ ಗೌರವವಾದ ಗ್ರಾಂಡ್ ಕ್ರಾಸ್ ಆಫ್ ದಿ ಲೆಜಿಯನ್ ಆಫ್ ಹಾನರ್ ಪ್ರದಾನ ಮಾಡಲಾಗಿತ್ತು. ರಾಹುಲ್ ಹೇಳಿಕೆಯ ಬಗ್ಗೆ ಪ್ರತಿಕ್ರಿಯಿಸಿರುವ ಬಿಜೆಪಿ ವಕ್ತಾರ ಗೌರವ್ ಭಾಟಿಯ, ಸುಪ್ರೀಂ ಕೋರ್ಟ್ ಸಾಕಷ್ಟು ಹಿಂದೆಯೇ ರಫೇಲ್ ವಿಷಯ ಇತ್ಯರ್ಥಗೊಳಿಸಿದೆ. ಸಂವಿಧಾನಿಕ ಸಂಸ್ಥೆಗಳ ತೇಜೋವಧೆ ಮಾಡುವುದನ್ನು ರಾಹುಲ್ ಗಾಂಧಿ ನಿಲ್ಲಿಸಬೇಕು ಎಂದಿದ್ದಾರೆ.

# ನಗರದಲ್ಲಿ ಇಂದು ಕಟ್ಟಡ ನಿರ್ಮಾಣ ಕಾರ್ಮಿಕರ ಜಿಲ್ಲಾ ಸಮ್ಮೇಳನ

ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಶನ್ ಜಿಲ್ಲಾ ಸಮಿತಿ ವತಿಯಿಂದ ಇಂದು ಬೆಳಿಗ್ಗೆ 10.30 ಕ್ಕೆ ಚನ್ನಗಿರಿ ವಿರೂಪಾಕ್ಷಪ್ಪ ಕಲ್ಯಾಣ ಮಂಟಪದಲ್ಲಿ ಕಟ್ಟಡ ನಿರ್ಮಾಣ ಕಾರ್ಮಿಕರ ಜಿಲ್ಲಾ ಸಮ್ಮೇಳನ ನಡೆಯಲಿದೆ.

ಫೆಡರೇಶನ್ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ. ಮಹಾಂತೇಶ್ ಸಮ್ಮೇಳನ ಉದ್ಘಾಟಿಸುವರು. ಸಿಐಟಿಯು ಜಿಲ್ಲಾ ಸಂಚಾಲಕ ಆನಂದರಾಜು ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಎಲ್.ಹೆಚ್. ಅರುಣ್ ಕುಮಾರ್, ಜಿ.ಎಸ್. ಬಸವರಾಜ್, ರೇಣುಕಮ್ಮ ಗಜೇಂದ್ರಪ್ಪ, ಅಶ್ಪಕ್ ಅಹಮ್ಮದ್, ಕೆ. ಮುದಿಮಲ್ಲನಗೌಡ, ಬಿ.ಸಿ. ಶಿವಮೂರ್ತಿ, ಕೆ. ಶ್ರೀನಿವಾಸಮೂರ್ತಿ, ಬಿ.ಎನ್. ಹಾಲೇಶನಾಯ್ಕ, ನೀಲಮ್ಮ, ಇ. ಶ್ರೀನಿವಾಸ, ಎ. ವೆಂಕಟೇಶ್ ಮತ್ತಿತರರು ಭಾಗವಹಿಸಲಿದ್ದಾರೆ.

# ನಗರದಲ್ಲಿ ಇಂದು ವಾಸ್ಕ್ಯುಲರ್ ಶಸ್ತ್ರ ಚಿಕಿತ್ಸಾ ತಜ್ಞರಿಂದ ಸಮಾಲೋಚನೆ

ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯ ವಾಸ್ಕ್ಯುಲರ್ ಶಸ್ತ್ರ ಚಿಕಿತ್ಸಾ ತಜ್ಞ ಡಾ. ಬಿ. ರಾಜೇಂದ್ರ ಪ್ರಸಾದ್ ಅವರು ಆರೈಕೆ ಆಸ್ಪತ್ರೆಯಲ್ಲಿ ಇಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 1 ರ ವರೆಗೆ ಸಮಾಲೋಚನೆಗೆ ಲಭ್ಯವಿರುತ್ತಾರೆ. ಉಬ್ಬಿರುವ ರಕ್ತನಾಳಗಳು, ಕೈಕಾಲುಗಳ ಊತ - ನೋವು ಮುಂತಾದ ಸಮಸ್ಯೆಗಳಿಗೆ ವಿವರಕ್ಕೆ ಸಂಪರ್ಕಿಸಿ : 8050560580.

# ಜನಸಂಖ್ಯಾ ಹೆಚ್ಚಳದಿಂದ ಸಂಪನ್ಮೂಲಗಳ ಕೊರತೆ : ಶಾಸಕ ಹರೀಶ್



ಹರಿಹರ, ಜು.15 - ಜನಸಂಖ್ಯಾ ಹೆಚ್ಚಳದಿಂದ ಸಂಪನ್ಮೂಲಗಳ ಕೊರತೆ ಉಂಟಾಗುತ್ತದೆ. ಮಾಲಿನ್ಯ ಹೆಚ್ಚಾಗುವ ಜೊತೆಗೆ ನಗರಗಳಲ್ಲಿ ಕೊಳಚೆ ಪ್ರದೇಶಗಳ ಸಮಸ್ಯೆ ಉಲ್ಬಣಿಸುತ್ತದೆ ಎಂದು ಶಾಸಕ ಬಿ.ಪಿ. ಹರೀಶ್ ಹೇಳಿದರು.

ನಗರದ ಗುರುಭವನದಲ್ಲಿ ನಡೆದ ಜನಸಂಖ್ಯಾ ದಿನಾಚರಣೆಯನ್ನು ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜನಸಂಖ್ಯಾ ಹೆಚ್ಚಳವು ವಸತಿ ಹಾಗೂ ಶಿಕ್ಷಣದ ಸಮಸ್ಯೆ ತರುತ್ತದೆ. ನಗರಗಳಲ್ಲಿ ಕೊಳಚೆ ಪ್ರದೇಶಗಳ ಸಮಸ್ಯೆ ಇನ್ನಷ್ಟು ಹೆಚ್ಚಾಗುತ್ತದೆ ಎಂದು ತಿಳಿಸಿದು.

ವೈದ್ಯ ರೇಣುಕಾರಾಧ್ಯ ಮಾತನಾಡಿ, ಜನಸಂಖ್ಯೆ ನಿಯಂತ್ರಿಸಲು ಕುಟುಂಬ ಯೋಜನೆಯನ್ನು ಅಳವಡಿಸಿಕೊಳ್ಳಬೇಕು. ಇದಕ್ಕೆ ಹಲ ವಾರು ವೈದ್ಯಕೀಯ ನೆರವುಗಳು ಲಭ್ಯವಿವೆ ಎಂದರು.

ಸಂಪನ್ಮೂಲ ವ್ಯಕ್ತಿಗಳಾಗಿ ಶಿಕ್ಷಕ ಶ್ರೀಧರಮಯ್ಯ ಮಾತನಾಡಿ, ಜನಸಂಖ್ಯೆ ನಿಯಂತ್ರಣ ಮಾಡಿದರೆ ಭಾರತ ಪ್ರಪಂಚದ ಶ್ರೀಮಂತ ರಾಷ್ಟ್ರಗಳಲ್ಲಿ ಒಂದಾಗುತ್ತದೆ ಎಂದು ಹೇಳಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ನಗರಸಭೆ ಅಧ್ಯಕ್ಷೆ ನಿಂಬಕ್ಕ ಚಂದಾಪುರ, ಜನಸಂಖ್ಯೆ ನಿಯಂತ್ರಣ ಸಮುದಾಯದ ಸಹಭಾಗಿತ್ವದಿಂದ ಮಾತ್ರ ಸಾಧ್ಯ ಎಂದು ಹೇಳಿದರು. ತಾಲ್ಲೂಕು ಆರೋಗ್ಯ ಅಧಿಕಾರಿ ಚಂದ್ರಮೋಹನ್ ಅವರು ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು.

ಈ ಸಂದರ್ಭದಲ್ಲಿ ಡಾ. ವಿಶ್ವನಾಥ್, ಡಾ. ಕಲ್ಲೇಶ್, ಡಾ. ಕಾವ್ಯ, ಡಾ. ಮಮತಾ, ಡಾ. ಗಿರಿಜಾ, ಹೊರಕೇರಿ ಉಮ್ಮಣ್ಣ, ನಾಗರಾಜ್, ಸುಧಾ, ಕವಿತಾ, ಮಂಜಣ್ಣ, ದಾದಾಪೀರ್, ಮಹೇಶ್, ಶಶಿಕಾಂತ್, ಮಂಜುನಾಥ್, ಸತೀಶ್ ಉಪಸ್ಥಿತರಿದ್ದರು.


## ಆಂಜನೇಯ ಬಿ.ಹೆಚ್. ನಿಧನ
(SBI ಬ್ಯಾಂಕ್ ನಿವೃತ್ತ ಮ್ಯಾನೇಜರ್)



**ಆಂಜನೇಯ ಬಿ.ಹೆಚ್.**
(SBI ಬ್ಯಾಂಕ್ ನಿವೃತ್ತ ಮ್ಯಾನೇಜರ್)

ಇವರು, ದಿನಾಂಕ ; 15.7.2023 ರಂದು ಮುಂಜಾನೆ 4.30ಕ್ಕೆ ಲಿಂಗೈಕ್ಯರಾದರು ಎಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 69 ವರ್ಷ ವಯಸ್ಸಾಗಿತ್ತು. ಮೃತರು ಪತ್ನಿ, ಮಗ, ಸೊಸೆ, ಇಬ್ಬರು ಹೆಣ್ಣು ಮಕ್ಕಳು, ಸ್ವಂತ ತಮ್ಮ, ಅಳಿಯಂದಿರು ಮತ್ತು ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗ, ಮಿತ್ರರನ್ನು ಅಗಲಿದ್ದಾರೆ.
ಮೃತರ ಅಂತಿಮ ದರ್ಶನವನ್ನು ನಾಳೆ 16.07.2023ರ ಭಾನುವಾರ ಲೋಕಿಕೆರೆ ಗ್ರಾಮದ ತೋಟದ ಮನೆಯಲ್ಲಿ ಬೆಳಿಗ್ಗೆ 8 ರಿಂದ 9 ರವರೆಗೆ ಏರ್ಪಡಿಸಲಾಗಿದೆ.
**ಮೃತರ ಅಂತ್ಯಕ್ರಿಯೆಯನ್ನು ಅವರ ಸ್ವಂತ ಜಮೀನಿನಲ್ಲಿ ಅಂದರೆ ತಿಮ್ಮಪ್ಪನ ಮಟ್ಟಿಯಲ್ಲಿ (ವೈ.ಎನ್.ಕ್ಯಾಂಪ್ ) ಬೆಳಿಗ್ಗೆ 10.00 ಗಂಟೆಗೆ ನೆರವೇರಿಸಲಾಗುವುದು.**
**ಫೋ. : 9480712324, 7975648067**

## ಶ್ರೀಮತಿ ಗಂಗಮ್ಮ ಮುಮ್ಮಗಟ್ಟಿ ನಿಧನ



ದಾವಣಗೆರೆ ಸಿಟಿ ವಿನೋಬನಗರ 1ನೇ ಮೇನ್, 8ನೇ ಕ್ರಾಸ್, ಡೋರ್ ನಂ. 1241/1,2ರ ವಾಸಿ ನಿವೃತ್ತ ಡಿ.ಆರ್.ಎಂ. ಕ್ಲರ್ಕ್ ಪಿ.ಕೆ. ಮುಮ್ಮಗಟ್ಟಿ ಇವರ ಪತ್ನಿ
**ಶ್ರೀಮತಿ ಗಂಗಮ್ಮ ಮುಮ್ಮಗಟ್ಟಿ**
ಇವರು, ದಿನಾಂಕ 15.7.2023ರ ಶನಿವಾರ ಬೆಳಿಗ್ಗೆ 8.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 73 ವರ್ಷ ವಯಸ್ಸಾಗಿತ್ತು. ಪತಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ, ಮೊಮ್ಮಗಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 15.7.2023ರ ಶನಿವಾರ ಸಂಜೆ 4.30ಕ್ಕೆ ಬೂದಿಹಾಳ್ ರಸ್ತೆಯಲ್ಲಿರುವ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.
**ದುಃಖತಪ್ತ ಕುಟುಂಬ ವರ್ಗ : ಮೊ: 97439 62162 / 87227 32264 / 97439 64225 / 83108 14498**


# ವಸತಿ ಹಂಚಿಕೆ ವಿಳಂಬಕ್ಕೆ ಸಂಸದರ ಅಸಮಾಧಾನ

**(1ನೇ ಪುಟದಿಂದ)** ಇದೆ. ಈ ಯೋಜನೆಯಡಿ ನಮಗೆ ಯಾರೂ ಸೂರು ಕಲ್ಪಿಸಿಲ್ಲ ಎಂದು ಗ್ರಾಮೀಣ ಭಾಗದ ಜನತೆ ಹೇಳುತ್ತಿದ್ದಾರೆ ಎಂದು ದಿಶಾ ಸಮಿತಿ ಸದಸ್ಯರು ಸಭೆಯ ಗಮನಕ್ಕೆ ತಂದರು. ಆ ಭಾಗದ ಸ್ಥಳೀಯ ಜನಪ್ರತಿನಿಧಿಗಳು ನಾವು ಮನೆ ಕಟ್ಟಿಕೊಟ್ಟಿದ್ದೇವೆ ಎಂದು ಹೇಳಿಕೊಂಡು ತಿರುಗಾಡುತ್ತಾರೆ. ಇದು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, ಈ ಬಗ್ಗೆ ಅಧಿಕಾರಿಗಳು ಅರಿವು ಮೂಡಿಸಬೇಕು ಎಂದು ಸಿದ್ದೇಶ್ವರ ಹೇಳಿದರು.

**ರುದ್ರಭೂಮಿಯಲ್ಲಿ ರಸ್ತೆ ಮಾಯ !:** ಶ್ರೀರಾಮ ನಗರದ ಬಳಿಯ ರುದ್ರ ಭೂಮಿಯಲ್ಲಿ ರಸ್ತೆ ಮಾಡಿಸಲಾಗಿದೆ ಎಂದು ಹೇಳಲಾಗಿದೆ. ಆದರೆ ಅಲ್ಲಿ ಗ್ರಾವೆಲ್ ಮಾರ್ಕ್ ಮಾತ್ರ ಇದೆ. ರಸ್ತೆಯೇ ಇಲ್ಲ ಎಂದು ದಿಶಾ ಸಮಿತಿ ಸದಸ್ಯರು ಸಭೆಯ ಗಮನಕ್ಕೆ ತಂದರು.

ಈ ರೀತಿಯಾಗಲು ಸಾಧ್ಯವಿಲ್ಲ. ಮೂರನೇ ಪಾರ್ಟಿ ತನಿಖೆ ನಂತರವೇ ಹಣ ಬಿಡುಗಡೆ ಮಾಡಲಾಗುತ್ತಿದೆ ಎಂದು ಪಾಲಿಕೆ ಆಯುಕ್ತರಾದ ರೇಣುಕಾ ಹೇಳಿದಾಗ, 3ನೇ ಪಾರ್ಟಿಯೂ ಹಣ ತಿಂದರೆ ಏನು ಮಾಡುವುದು? ಎಂದು ಸಂಸದರು ಪ್ರಶ್ನಿಸಿದರು. ನಿಮ್ಮ ಕೆಲಸದ ಬಗ್ಗೆ ಮೆಚ್ಚುಗೆಯ ಮಾತುಗಳು ಕೇಳಿ ಬರುತ್ತಿವೆ. ರಸ್ತೆ ಬಗ್ಗೆ ಪರಿಶೀಲಿಸಿ ಎಂದು ಆಯುಕ್ತರಿಗೆ ಹೇಳಿದಾಗ, ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ರೇಣುಕಾ ಹೇಳಿದರು.

ಮಲೇಬೆನ್ನೂರು ಪುರಸಭೆ ವತಿಯಿಂದ ನಿರ್ಮಾಣವಾದ ಘನ ತ್ಯಾಜ್ಯ ಘಟಕದ ಕಾಮಗಾರಿಯಲ್ಲಿ ಲೋಪಗೊಂಡಿರುವುದನ್ನು ಒಪ್ಪಿಕೊಂಡ ಅಧಿಕಾರಿಗಳು, ಸರಿಪಡಿಸಿರುವುದಾಗಿ ವರದಿ ನೀಡಿದಾಗ, ಲೋಪಕ್ಕೆ ಕಾರಣ ಅಧಿಕಾರಿಗಳಲ್ಲವೇ ಎಂದು ಇಂಜಿನಿಯರ್‌ಗಳನ್ನು ಸಂಸದರು ತರಾಟೆಗೆ ತೆಗೆದುಕೊಂಡರು.

**ಭ್ರಷ್ಟಾಚಾರ:** ಜಲಜೀವನ್ ಮಿಷನ್ ಯೋಜನೆಯಲ್ಲಿ ಭ್ರಷ್ಟಾಚಾರ ನಡೆಸಲಾಗಿದೆ ಎಂದು ದಿಶಾ ಸಮಿತಿ ಸದಸ್ಯರೊಬ್ಬರು ಆರೋಪಿ ಸಿದರು. ಅಧಿಕಾರಿಗಳು ಹಾಗೂ ಗ್ರಾ.ಪಂ. ಅಧ್ಯಕ್ಷರೂ ಶಾಮೀ ಲಾಗಿರುವ ಶಂಕೆ ಇದೆ ಎಂದು ಅನುಮಾನ ವ್ಯಕ್ತ ಪಡಿಸಿದರು. ಪರಿಶೀಲಿಸಿ, ವರದಿ ನೀಡುವುದಾಗಿ ಸಿಇಒ ಸುರೇಶ್ ಇಟ್ನಾಳ್ ಹೇಳಿದರು.

ಜಿಲ್ಲಾಸ್ಪತ್ರೆಯಲ್ಲಿ ಔಷಧಿಗಳಿಗೆ ಚೀಟಿ ಬರೆದು ಹೊರಗಡೆ ತರಲು ಕಳುಹಿಸುವುದು ಗಮನಕ್ಕೆ ಬಂದಿದ್ದು, ಈ ರೀತಿಯಾಗದಂತೆ ನೋಡಿಕೊಳ್ಳಿ ಎಂದು ಸಂದರು ಹೇಳಿದರು. ಜಿಲ್ಲಾಸ್ಪತ್ರೆ ಡಯಾಲಿಸಿಸ್ ಘಟಕಗಳ ನಿರ್ವಹಣೆ ಹೊರ ಗುತ್ತಿಗೆ ನೀಡಲಾಗಿದ್ದು, ಗುತ್ತಿಗೆದಾರರಿಗೆ ಹಣ ಪಾವತಿಸದ ಕಾರಣ ಅವರು ಯಾವುದಕ್ಕೂ ಸ್ಪಂದಿಸುತ್ತಿಲ್ಲ ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ಹೇಳಿದರು.

ಜಗಳೂರು ಶಾಸಕ ಬಿ.ದೇವೇಂದ್ರಪ್ಪ, ಹರಿಹರ ಶಾಸಕ ಬಿ.ಪಿ. ಹರೀಶ್, ಸಿಇಒ ಸುರೇಶ್ ಇಟ್ನಾಳ್, ದಿಶಾ ಸದಸ್ಯರಾದ ಭಾಗ್ಯಾ ಪಿಸಾಳೆ, ಎಂ.ಎಸ್. ಮಂಜುನಾಥ್, ಎಂ.ಗುರುನಾಥ್, ಗಂಗಾಧರ್ , ಜಿ.ಪಂ. ಯೋಜನಾ ನಿರ್ದೇಶಕ ಡಾ. ಎ. ಚನ್ನಪ್ಪ, ಮುಖ್ಯ ಯೋಜನಾಧಿಕಾರಿ ಮಲ್ಲಾ ನಾಯ್ಕ್, ಮುಖ್ಯ ಲೆಕ್ಕಾಧಿಕಾರಿ ಸೌಮ್ಯಶ್ರೀ ಇತರರು ಸಭೆಯಲ್ಲಿ ಇದ್ದರು.

## ಮಸೀದಿ ಆಡಳಿತಾಧಿಕಾರಿ ನೇಮಕಕ್ಕೆ ಶಾಸಕ ಹರೀಶ್ ಆಕ್ಷೇಪ

2 ಕೋಟಿ ರೂ. ಅಕ್ರಮ ನಡೆದು ತನಿಖೆ ಎದುರಿಸುತ್ತಿರುವ ಮಲೇಬೆನ್ನೂರಿನ ಜಾಮಿಯಾ ಮಸೀದಿಗೆ ವೈದ್ಯ ಡಾ.ನಿಸಾರ್ ಅಹ್ಮದ್‌ರನ್ನು ಆಡಳಿತಾಕಾರಿಯಾಗಿ ನೇಮಿಸಿರುವುದು ಏಕೆ? ಎಂದು ಶಾಸಕ ಬಿ.ಪಿ ಹರೀಶ್ ದಿಶಾ ಸಭೆಯಲ್ಲಿಂದು ಅಧಿಕಾರಿಗಳನ್ನು ಪ್ರಶ್ನಿಸಿದರು. ಸರ್ಕಾರಿ ವೈದ್ಯರನ್ನು ಬೇರೆ ಕೆಲಸಕ್ಕೆ ನಿಯೋಜಿಸಬಾರದೆಂಬ ನಿಯಮವಿದ್ದರೂ ಇಲ್ಲಿ ನೇಮಕ ಮಾಡಲಾಗಿದೆ. ಅಲ್ಲದೆ, ಆ ಹಗರಣದಲ್ಲಿ ನೇಮಕಗೊಂಡ ವೈದ್ಯರ ಸಂಬಂಧಿಕರೇ ಪಾಲುದಾರರಾಗಿದ್ದಾರೆ. ತಕ್ಷಣ ಅವರನ್ನು ಮಾತೃ ಇಲಾಖೆಗೆ ಕರೆಯಿಸಿಕೊಳ್ಳಬೇಕು ಎಂದು ಹರೀಶ್ ಅಧಿಕಾರಿಗಳಿಗೆ ಸೂಚಿಸಿದರು. ಹರಿಹರದ ಹಳೇ ಆಸ್ಪತ್ರೆಯನ್ನು ರಾಜಕಾರಣಿಯೊಬ್ಬರಿಗೆ ಸೇರಿದ ಶೈಲೇಂದ್ರ ಫೌಂಡೇಷನ್‌ಗೆ ನೀಡಿರುವುದನ್ನು ವಾಪಸ್ ಪಡೆದು, ತಮಗೆ ಜನಸಂಪರ್ಕ ಕಚೇರಿ ನೀಡಬೇಕು ಎಂದು ಶಾಸಕ ಬಿ.ಪಿ. ಹರೀಶ್ ಹೇಳಿದರು.


## ಹರಳಹಳ್ಳಿ ಗ್ರಾಮದ ಮಠದ ಶ್ರೀಮತಿ ಬಸಮ್ಮ ನಿಧನ



ಹರಿಹರ ತಾಲ್ಲೂಕು ಹರಳಹಳ್ಳಿ ಗ್ರಾಮದ ವೇ. ಮಠದ ಬಸವರಾಜಯ್ಯನವರ ತಾಯಿ ಹಾಗೂ ಮಲೇಬೆನ್ನೂರಿನ ರೈಸ್‌ಮಿಲ್ ಮಾಲೀಕರಾದ ಬಿ.ಎಂ. ನಂಜಯ್ಯನವರ ಸಹೋದರಿಯೂ ಆದ
**ಶ್ರೀಮತಿ ಬಸಮ್ಮನವರು** (85 ವರ್ಷ)
ದಿನಾಂಕ 15.7.2023ರ ಶನಿವಾರ ಸಂಜೆ 6 ಗಂಟೆಗೆ ನಿಧನರಾದರು. ಓರ್ವ ಪುತ್ರ, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 16.7.2023ರ ಭಾನುವಾರ ಮಧ್ಯಾಹ್ನ 12 ಗಂಟೆಗೆ ಹರಳಹಳ್ಳಿ ಗ್ರಾಮದಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ
ಬಿ.ಎಂ. ನಂಜಯ್ಯ ಮತ್ತು ಭಾನುವಳ್ಳಿ ಮಠದ ವಂಶಸ್ಥರು, ಮಲೇಬೆನ್ನೂರು.
ಮಠದ ಬಸವರಾಜಯ್ಯ ಮತ್ತು ಮಕ್ಕಳು, ಹರಳಹಳ್ಳಿ
ಹರಳಹಳ್ಳಿ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು.



**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು



॥ ಶ್ರೀ ಶಿವ ನಾರದಮುನಿ ಪ್ರಸನ್ನ ॥

## ಕೈಲಾಸ ಸಮಾರಾಧನೆ ಆಹ್ವಾನ



ದಾವಣಗೆರೆ ತಾಲ್ಲೂಕು ಮೆಳ್ಳೇಕಟ್ಟೆ ಗ್ರಾಮದ ವಾಸಿಗಳಾದ
ದಿ॥ ಬಿ.ಎಂ. ವಿರೂಪಾಕ್ಷಪ್ಪನವರ ಪುತ್ರ ಶ್ರೀ ಕೆ.ವಿ. ನಾಗರಾಜ್, ಶಿಕ್ಷಕರು
ಶ್ರೀಮತಿ ಯಶೋಧ ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 08.07.2023ರ ಶನಿವಾರ ಬೆಳಗಿನ ಜಾವ 6.40ಕ್ಕೆ ನನ್ನ ಪೂಜ್ಯ ತಾಯಿಯವರಾದ
**ಲಲಿತಮ್ಮನವರು (ರುದ್ರಮ್ಮ)**
ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಸಮಾರಾಧನೆಯನ್ನು**
ದಿನಾಂಕ : 16.07.2023ನೇ ಭಾನುವಾರ ಬೆಳಿಗ್ಗೆ 10.30ಕ್ಕೆ ಮೃತರ ಸ್ವಗೃಹ ಆಲೂರುಹಟ್ಟಿ ಹತ್ತಿರ ಮೆಳ್ಳೇಕಟ್ಟೆ, ದಾವಣಗೆರೆ ತಾಲ್ಲೂಕು ಇಲ್ಲಿ ನೆರವೇರಿಸಲು ಗುರು ಹಿರಿಯರು ನಿಶ್ಚಯಿಸಿರುವುದರಿಂದ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
ಶ್ರೀಮತಿ ಯಶೋಧ ಶ್ರೀ ಕೆ.ವಿ. ನಾಗರಾಜ್, ಶಿಕ್ಷಕರು, ಮೆಳ್ಳೇಕಟ್ಟೆ.
ಶ್ರೀಮತಿ ಸುಶೀಲ ಶ್ರೀ ಕೆ.ವಿ.ಹೇಮಂತರಾಜು, ಮೆಳ್ಳೇಕಟ್ಟೆ.
ಶ್ರೀಮತಿ ಜಿ.ಹೆಚ್. ಸುಮಂಗಲ ಲೇ॥ ಜಿ. ಹನುಮಂತಪ್ಪ, ಶಾಮನೂರು.
ಶ್ರೀಮತಿ ಅನ್ನಪೂರ್ಣ ಶ್ರೀ ಬಿ.ಆರ್. ರುದ್ರಮುನಿ, ಮೆಳ್ಳೇಕಟ್ಟೆ.
ಶ್ರೀಮತಿ ಅನಿತ ಶ್ರೀ ಎಸ್. ಚಂದ್ರಶೇಖರಪ್ಪ, ಶಾಮನೂರು.
ಶ್ರೀಮತಿ ರೇಖಾ ಶ್ರೀ ಎನ್. ಬಸವರಾಜ್, ಮೆಳ್ಳೇಕಟ್ಟೆ, ಮಕ್ಕಳು, ಮೊಮ್ಮಕ್ಕಳು,
ಗಿರಿಯವ್ವಳ ವಂಶಸ್ಥರು ಶಾಮನೂರು, ನಾರಪ್ಪ ವಂಶಸ್ಥರು ಕುರುಡಿ,
ಬೇತೂರು ವಂಶಸ್ಥರು, ಮೆಳ್ಳೇಕಟ್ಟೆ ಹಾಗೂ ಬಂಧು - ಮಿತ್ರರು.

ವಿ.ಸೂ. : ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಲು ಕೋರಿದೆ.


# ಶಿಕ್ಷೆ ತಡೆಗಾಗಿ ಸುಪ್ರೀಂನಲ್ಲಿ ರಾಹುಲ್ ಗಾಂಧಿ ಅರ್ಜಿ

ನವದೆಹಲಿ, ಜು. 15 - ಮೋದಿ ಉಪನಾಮಕ್ಕೆ ಸಂಬಂಧಿಸಿದಂತೆ ನೀಡಿದ ಹೇಳಿಕೆಗಾಗಿ ತಮಗೆ ವಿಧಿಸಲಾಗಿರುವ ಶಿಕ್ಷೆಯನ್ನು ರದ್ದುಗೊಳಿಸುವಂತೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದಾರೆ.

ಶಿಕ್ಷೆಗೆ ತಡೆ ನೀಡಬೇಕೆಂದು ರಾಹುಲ್ ಗಾಂಧಿ ದಾಖಲಿಸಿದ್ದ ಅರ್ಜಿಯನ್ನು ಗುಜರಾತ್ ಹೈಕೋರ್ಟ್ ತಳ್ಳಿ ಹಾಕಿತ್ತು. ಈ ಆದೇಶ ಪ್ರಶ್ನಿಸಿ ಅವರು ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದಾರೆ.

ಗುಜರಾತ್ ನ್ಯಾಯಾಲಯವೊಂದು ರಾಹುಲ್ ಗಾಂಧಿಗೆ ಮಾನ ಹಾನಿ ಪ್ರಕರಣದಲ್ಲಿ ಎರಡು ವರ್ಷ ಜೈಲು ಶಿಕ್ಷೆ ವಿಧಿಸಿತ್ತು. ಮಾರ್ಚ್ 24, 2023ರಂದು ಹೊರ ಬಿದ್ದ ಈ ತೀರ್ಪಿನ ಕಾರಣದಿಂದಾಗಿ ರಾಹುಲ್ ಗಾಂಧಿ ಲೋಕಸಭಾ ಸದಸ್ಯತ್ವದಿಂದ ಅನರ್ಹರಾಗಿದ್ದರು. ಶಿಕ್ಷೆಗೆ ತಡೆಯಾಜ್ಞೆ ದೊರೆತಲ್ಲಿ ಅವರು ಲೋಕಸಭಾ ಸದಸ್ಯರಾಗಲು ಸಾಧ್ಯವಾಗಲಿದೆ.


## 12ನೇ ವರ್ಷದ ಪುಣ್ಯಸ್ಮರಣೆ



**ದಿ॥ ಹೆಚ್.ಆರ್. ರುದ್ರಪ್ಪ**
ಮರಣ : 16.07.2011

ನೀವು ನಮ್ಮನ್ನಗಲಿ ಇಂದಿಗೆ ಹನ್ನೆರಡು ವರ್ಷಗಳಾದವು. ನೀವು ಹಾಕಿಕೊಟ್ಟ ಮಾರ್ಗದಲ್ಲೇ ಮುನ್ನಡೆಯುತ್ತಾ, ಸದಾ ನಿಮ್ಮ ಸ್ಮರಣೆಯಲ್ಲಿರುವ,

ಮಗ : ಹೆಚ್.ಆರ್. ಹನುಮಂತಪ್ಪ, ಸೊಸೆ : ಮೀನಾಕ್ಷಿ
ಮೊಮ್ಮಕ್ಕಳು : ಹೆಚ್.ಹೆಚ್. ಬಿಂದು, ಹೆಚ್.ಹೆಚ್. ಮಂಜುನಾಥ್
ಮರಿಮೊಮ್ಮಗ: ಹೆಚ್.ಹೆಚ್. ಸಾಯಿಲಿಖಿತ್ ಹಾಗೂ ಬಂಧು-ಮಿತ್ರರು.


# ನಗರದಲ್ಲಿ ಇಂದು ಆರೋಗ್ಯ ತಪಾಸಣೆ

ಹೋಮಿಯೋಪಥಿ ವೈದ್ಯಕೀಯ ಸಂಘ, ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ಇಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1ರವರೆಗೆ ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಲಿದೆ. ಡಾ. ಮಾವಿಶೆಟ್ಟರ್, ಡಾ. ಕೆ.ಆರ್. ಶರತ್‌ರಾಜ್, ಡಾ. ಸಿ.ಎನ್.ಕೋಟಿಹಾಳ್, ಡಾ. ಎ.ಎನ್. ಸುಂದರೇಶ್, ಡಾ. ಆರತಿ ಸುಂದರೇಶ್, ಡಾ. ಜಿ.ಎಸ್. ಗಿರೀಶ್, ಡಾ. ವಿಶ್ವನಾಥ್ ಹಳ್ಳಿಕೇರಿ, ಡಾ. ಎಸ್. ರಂಗರಾಜನ್ ತಪಾಸಣೆ ನಡೆಸುವರು. ಸಂಪರ್ಕಿಸಿ : 63631 51534.

KA/SK/CTA-275/2021-2023. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ವಿಪಕ್ಷಗಳ ಸಭೆಯಲ್ಲಿ ಪಾಲ್ಗೊಳ್ಳಲು 26 ಪಕ್ಷಗಳಿಗೆ ಕಾಂಗ್ರೆಸ್ ಆಹ್ವಾನ

ಬೆಂಗಳೂರು, ಜು.15 - ಮುಂಬ ರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯ ವಿರುದ್ಧ ಪ್ರತಿಪಕ್ಷಗಳನ್ನು ಒಗ್ಗೂಡಿಸಲು ಕಾಂಗ್ರೆಸ್ ನಾಡಿದ್ದು ದಿನಾಂಕ 17 ಮತ್ತು 18 ರಂದು ನಗರದಲ್ಲಿ ವಿಪಕ್ಷಗಳ ಪ್ರಮುಖ ನಾಯಕರ ಸಭೆ ಆಯೋಜಿಸಿದೆ.

ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪರ್ಯಾಯವಾಗಿ ವರ್ಚಸ್ವಿ ನಾಯಕನ ಆಯ್ಕೆ ಮತ್ತು ಸಂಘಟನಾ ತ್ಮಕವಾಗಿ ಎನ್‌ಡಿಎ ವಿರುದ್ಧ ಹೋರಾಡಲು ಈ ಸಭೆ ಭೂಮಿಕೆ ಸಿದ್ಧಪಡಿಸಲಿದೆ. ಕಾಂಗ್ರೆಸ್‌ನ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ 26 ರಾಷ್ಟ್ರೀಯ ಪಕ್ಷಗಳ ಪ್ರಮುಖ ನಾಯಕರನ್ನು ಆಹ್ವಾನಿಸಿದ್ದಾರೆ.

ನಗರದ ವೆಸ್ಟ್‌ಎಂಡ್ ಹೋಟೆಲ್‌ನಲ್ಲಿ ಎರಡು ದಿನಗಳ ಸಭೆ ಜರುಗಲಿದ್ದು, ನಾಡಿದ್ದು ಸೋಮವಾರ ಸಂಜೆ 4 ಗಂಟೆಯಿಂದಲೇ ಮೊದಲ ಸಭೆ ಆರಂಭವಾಗಲಿದೆ.

ಬೆಂಗಳೂರಿನಲ್ಲಿ ನಡೆಯಲಿರುವ ಏಕತಾ ಸಭೆಯಲ್ಲಿ ಭಾಗವಹಿಸಲು ಮಲ್ಲಿಕಾರ್ಜುನ ಖರ್ಗೆ ಈ 26 ಪಕ್ಷಗಳ ನಾಯಕರಿಗೆ ಸಂಪರ್ಕ ಮಾಡಿ, ಆಹ್ವಾನ ನೀಡಿರುವ ಜೊತೆಗೆ ಪತ್ರದ ಮೂಲಕವೂ ಮನವಿ ಮಾಡಿಕೊಂಡಿದ್ದಾರೆ.

ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಜೂನ್ 23 ರಂದು ಪಾಟ್ನಾದಲ್ಲಿ ವಿರೋಧ ಪಕ್ಷದ ನಾಯಕರ ಸಭೆ ನಡೆಸಿದ್ದರು. ಅದಾದ ನಂತರ ವಿರೋಧಿಗಳನ್ನು

### ನಾಳೆ-ನಾಡಿದ್ದು ಸಭೆ

ಸಂಘಟಿಸಲು ಈ ಸಭೆ ಆಯೋಜಿಸಿದ್ದೇನೆ ಎಂದಿದ್ದಾರೆ. ನಮ್ಮ ಪ್ರಜಾಸತಾತ್ಮಕ ರಾಜಕೀಯಕ್ಕೆ ಧಕ್ಕೆ ತರುವ ಹಲವಾರು ಪ್ರಮುಖ ವಿಷಯಗಳ ಕುರಿತು ಚರ್ಚಿಸಲು ಮುಂದಿನ ಸಾರ್ವತ್ರಿಕ ಚುನಾವಣೆಯಲ್ಲಿ ಒಗ್ಗಟ್ಟಿನಿಂದ ಹೋರಾಡಲು ಸರ್ವಾನುಮತದ ಒಪ್ಪಂದಕ್ಕೆ ಬಂದಿದ್ದರಿಂದ ಅಂದಿನ ಸಭೆ ಯಶಸ್ಸು ಕಂಡಿದೆ. ಪಾಟ್ನಾ ಸಭೆಯಲ್ಲೇ ಜುಲೈನಲ್ಲಿ ಮತ್ತೆ ಸಭೆ ಸೇರುವ ತೀರ್ಮಾನ ಕೈಗೊಂಡಿದ್ದೆವು. ಅದರಂತೆ ಬೆಂಗಳೂರಿನಲ್ಲಿ ಸಭೆ ಆಯೋಜಿಸಿದ್ದೇನೆ ಎಂದು ಖರ್ಗೆ ತಿಳಿಸಿದ್ದಾರೆ.

ಪಾಟ್ನಾದಲ್ಲಿ ನಡೆಸಿದ ಚರ್ಚೆಗಳನ್ನು ಮುಂದುವರೆಸುವುದು, ನಾವು ಸೃಷ್ಟಿಸಿದ ವೇಗವನ್ನು ಮುಂದುವರೆಸುವುದು ಮುಖ್ಯವಾಗಿದೆ. ನಮ್ಮ ರಾಷ್ಟ್ರ ಎದುರಿಸುತ್ತಿರುವ ಸವಾಲುಗಳಿಗೆ ಪರಿಹಾರಗಳನ್ನು ಕಂಡು ಹಿಡಿಯಲು ನಾವು ಒಟ್ಟಾಗಿ ಕೆಲಸ ಮಾಡಬೇಕಾಗಿದೆ. ಹೀಗಾಗಿ ನಾಡಿದ್ದು ದಿನಾಂಕ 17 ರಂದು ಬೆಂಗಳೂರಿನಲ್ಲಿ ಸಂಜೆ ಸೇರೋಣ. ಅಂದು ರಾತ್ರಿ ಚರ್ಚೆ ನಡೆಸಿ, ಮತ್ತೆ ಇದೇ ದಿನಾಂಕ 18 ರಂದು ಬೆಳಿಗ್ಗೆ 11 ಗಂಟೆಗೆ ಸಭೆ ಮುಂದುವರೆಸೋಣ ಎಂದಿದ್ದಾರೆ.

ಈ ಸಭೆ ಪ್ರಮುಖವಾಗಿ 2024ರಲ್ಲಿ ನಡೆಯುವ ಲೋಕಸಭೆ ಚುನಾವಣೆಯನ್ನು ಗ ಮ ನ ದ ಲ್ಲಿ ಟ್ಟು ಕೊ ಂ ಡೇ ಆಯೋಜಿಸಲಾಗಿದೆ.

ಪಾಟ್ನಾದಲ್ಲಿ ನಡೆದ ಸಭೆಯಲ್ಲಿ 15ಕ್ಕೂ ಹೆಚ್ಚು ಪಕ್ಷಗಳು ಭಾಗವಹಿಸಿದ್ದವು. ಬೆಂಗಳೂರಿನಲ್ಲಿ ನಡೆಯುತ್ತಿರುವ ಸಭೆಯಲ್ಲಿ ಕಾಂಗ್ರೆಸ್ ನಾಯಕರಲ್ಲದೇ ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್, ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟ್ಯಾಲಿನ್, ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಸೇರಿದಂತೆ ಪ್ರಮುಖ ನಾಯಕರು ಸಭೆಯಲ್ಲಿ ಭಾಗವಹಿಸಲಿದ್ದಾರೆ.

# ವಾರ ಭವಿಷ್ಯ

**ದಿನಾಂಕ : 16.07.2023 ರಿಂದ 22.07.2023**

**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ಅನಾವಶ್ಯಕವಾಗಿ ಮತ್ತೊಬ್ಬರ ಮೇಲೆ ಕೋಪಗೊಳ್ಳುವುದರಿಂದ ಏನೂ ಪ್ರಯೋಜನವಿಲ್ಲ. ಇದರಿಂದ ನಿಮ್ಮ ಘನತೆಗೆ ಕಳಂಕ ಬರಬಹುದು. ವಿದೇಶದಲ್ಲಿ ವ್ಯಾಪಾರ-ವ್ಯವಹಾರಗಳಿಗೆ ಉತ್ತಮ ಅವಕಾಶಗಳು ಬರಲಿವೆ. ಉದ್ಯೋಗದಲ್ಲಿ ಪದೋನ್ನತಿ ಪಡೆಯುವ ಮೊದಲು ಅದರ ಸಾಧಕ-ಬಾಧಕಗಳ ಅರಿವಿರುವುದು ಮೇಲು. ಹಿರಿಯರು ಸಕಾಲದಲ್ಲಿ ಮಾಡಲಿರುವ ನೆರವನ್ನು ನಿಸ್ಸಂಕೋಚವಾಗಿ ಪಡೆಯಿರಿ. ರಾಜಕೀಯ ರಂಗದಲ್ಲಿರುವವರಿಗೆ ಬಿಡುವಿಲ್ಲದ ಓಡಾಟವಾಗಲಿದೆ. ಆರ್ಥಿಕ ಪ್ರಗತಿ ಕ್ರಮೇಣ ಉತ್ತಮಗೊಳ್ಳಲಿದೆ. ಭಾನು-ಸೋಮ-ಮಂಗಳ-ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ಭೂಮಿಯ ಕೊಡುಕೊಳ್ಳುವಿಕೆ ಹೀಗೆ ಎರಡರಲ್ಲೂ ಲಾಭವಿರುವುದರಿಂದ ಸೂಕ್ತವಾದುದನ್ನು ಮಾಡಿರಿ. ಸಂಬಳದ ಮೇಲೆ ಅವಲಂಬಿಸಿರುವವರು ಖರ್ಚು-ವೆಚ್ಚಗಳ ಮೇಲೆ ಹಿಡಿತ ಸಾಧಿಸುವುದು ಮೇಲು. ಕಣ್ಣಿನ ತೊಂದರೆ ಕ್ರಮೇಣ ಸುಧಾರಿಸಲಿದೆ. ಪ್ರೇಮಿಗಳು ವೃಥಾ ತಿರುಗಾಡದೇ, ಒಂದು ನಿರ್ಧಾರಕ್ಕೆ ಬರುವುದು ಉತ್ತಮ. ಮಕ್ಕಳ ವಿದ್ಯಾಭ್ಯಾಸದಲ್ಲಿ ಹಿನ್ನಡೆ. ಕ್ರಮೇಣ ಸುಧಾರಿಸಲಿದೆ. ಸಾಕು ಪ್ರಾಣಿಗಳ ವಿಚಾರದಲ್ಲಿ ಸಾಕಷ್ಟು ಎಚ್ಚರದಿಂದಿರಿ. ಗೋ ಸೇವೆ ಮಾಡಿರಿ. ಗುರು-ಶುಕ್ರ-ಶನಿ-ಶುಭ ದಿನಗಳು.

**ಮಿಥುನ (3,4, ಆರಿವದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಊ, ಚ.ಕೆ.ಕೋ.ಹ.)**

ಹೊಸ ಜಾಗಕ್ಕೆ ವರ್ಗಾವಣೆಯಾಗಿ ಹೋದವರಿಗೆ ಅಲ್ಲಿಯ ಆಡಳಿತ ವರ್ಗದಿಂದ ಉತ್ತಮ ಸಹಕಾರ ದೊರೆಯಲಿದೆ. ವಿದೇಶಿ ವ್ಯವಹಾರ ಉತ್ತಮಗೊಳ್ಳಲಿದ್ದು ಹೆಚ್ಚಿನ ಪರಿಶ್ರಮ ಪಡಬೇಕಾದೀತು. ನವಜಾತ ಶಿಶುಗಳ ಆರೋಗ್ಯದಲ್ಲಿ ಹೆಚ್ಚಿನ ಸುಧಾರಣೆ ಕಂಡುಬರಲಿದೆ. ಹೂವು, ಹಣ್ಣು ಮತ್ತು ತರಕಾರಿ ವ್ಯಾಪಾರಿಗಳಿಗೆ ವ್ಯಾಪಾರ ದ್ವಿಗುಣಗೊಂಡು ಹೆಚ್ಚಿನ ಲಾಭವಾಗಲಿದೆ. ಸಮಾಜ ಸೇವೆಯಲ್ಲಿ ತೊಡಗಿದವರಿಗೆ ಸರ್ಕಾರದಿಂದ ಸನ್ಮಾನವಾಗಲಿದೆ. ಬಡ ವಿದ್ಯಾರ್ಥಿಗಳಿಗೆ ನೆರವಾಗುವಿರಿ. ಸೋಮ-ಬುಧ-ಶುಕ್ರ-ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೊ.ಡ.ಡಿ.ಡು.ಡೆ.ಡೋ)**

ಯಾರದೋ ಮಾತನ್ನು ಕೇಳಿ ಕುಟುಂಬದಲ್ಲಿ ಮೂಡಿದ್ದ ಭಿನ್ನಾಭಿಪ್ರಾಯವನ್ನು ಮನೆಯ ಹಿರಿಯರು ಬಗೆಹರಿಸುವರು. ಇದರಿಂದ ಮನೆಯಲ್ಲಿ ಸೌಹಾರ್ದತೆ ಮೂಡಲಿದೆ. ಮೂಡುತ್ತಿರುವ ಆತ್ಮವಿಶ್ವಾಸ ನಿಮ್ಮ ಗುರಿಯನ್ನು ತಲುಪಲು ನೆರವಾಗಲಿದೆ. ಅಡ್ಡ ದಾರಿಯಲ್ಲಿ ಸಂಪಾದನೆಗಿಳಿಯುವಂತೆ ಹಲವರಿಂದ ಪ್ರಚೋದನೆಯಾಗಲಿದೆ. ಆದರೆ ಅದರಿಂದ ಅಪಾಯ ತಪ್ಪಿದ್ದಲ್ಲ ಎಂಬುದು ನೆನಪಿರಲಿ.ಬಂದಿದ್ದ ಆಪಾದನೆಗಳು ದೂರವಾಗಲಿದೆ, ಸರ್ಕಾರಿ ಹಿರಿಯ ಅಧಿಕಾರಿಗಳಿಗೆ ಘನತೆ ಹೆಚ್ಚಾಗಲಿದೆ. ಸೋಮ-ಮಂಗಳ-ಗುರು-ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ಜಟಿಲವಾಗಿರುವ ಕೌಟುಂಬಿಕ ಸಮಸ್ಯೆಗಳಿಗೆ ತಾಳ್ಮೆಯೊಂದೇ ಇರುವ ಉಪಾಯ. ತಾಂತ್ರಿಕ ಕ್ಷೇತ್ರದಲ್ಲಿ ಪರಿಣಿತರಾದವರಿಗೆ ಉತ್ತಮ ಬೇಡಿಕೆ ಬರಲಿದೆ. ವೈದ್ಯಕೀಯ ಕ್ಷೇತ್ರದಲ್ಲಿರುವವರು ಹೆಚ್ಚಿನ ಸಾಧನೆ ಮಾಡುವರು. ಜೊತೆಗೆ ಅವರ ಸಂಪಾದನೆಯೂ ಹೆಚ್ಚಲಿದೆ. ಎಷ್ಟೇ ಆಪ್ತರಾಗಿದ್ದರೂ ಅವರೊಂದಿಗೆ ವೈಯಕ್ತಿಕ ವಿಚಾರಗಳನ್ನು ಹಂಚಿಕೊಳ್ಳಬೇಡಿ. ನುರಿತ ವಿದ್ವಾಂಸರಿಗೆ ಸಂಘ-ಸಂಸ್ಥೆಗಳಲ್ಲಿ ಹೆಚ್ಚಿನ ಅವಕಾಶಗಳು ದೊರೆಯಲಿವೆ. ಮನೆಯಲ್ಲಿ ನಡೆಯಬೇಕಾಗಿರುವ ಮಂಗಳ ಕಾರ್ಯಗಳು ಕಾರಣಾಂತರದಿಂದ ಮುಂದೆ ಹೋಗಲಿದೆ. ಭಾನು-ಮಂಗಳ-ಬುಧ-ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ಕಾರಣಾಂತರದಿಂದ ಬಂಧುಗಳ ನೆರವು ಇನ್ನು ಮುಂದೆ ಸಿಗದೇ ಹೋಗಬಹುದು.ನಿರುದ್ಯೋಗಿಗಳಿಗೆ ಸಂಪಾದನೆಗೆ ಹಲವು ದಾರಿ ಕಾಣಲಿವೆ. ಅದರ ಸದುಪಯೋಗವಾಗ ಬೇಕಷ್ಟೇ. ಹಣದ ಹರಿವು ಮಂದಗತಿಯಲ್ಲಿದ್ದರೂ ದೈನಂದಿನ ಜೀವನಕ್ಕೇನೂ ತೊಂದರೆಯಿಲ್ಲ. ಹೋಟೆಲ್ ಉದ್ಯಮದಲ್ಲಿ ತುಸು ಅಯೋಮಯ ಸ್ಥಿತಿ ತಾತ್ಕಾಲಿಕವಾಗಿ ಉಂಟಾಗಲಿದೆ. ವಿದ್ಯಾರ್ಥಿಗಳು ಉತ್ತಮ ಫಲಿತಾಂಶಕ್ಕೆ ಹೆಚ್ಚಿನ ಶ್ರಮಪಡದೇ ಬೇರೆ ದಾರಿಯಿಲ್ಲ. ಗುರುಗಳನ್ನು ಆರಾಧಿಸಿ. ಮಂಗಳ-ಬುಧ-ಗುರು-ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ಸಮಸ್ಯೆಗಳು ಇಷ್ಟೇ ಜಟಿಲವಾಗಿದ್ದರೂ, ಕಾಲ ಕ್ರಮೇಣ ಸರಿಹೋಗಲಿದೆ. ಸರ್ಕಾರದಿಂದಾಗಬೇಕಾಗಿರುವ ಕೆಲಸಗಳು ಕೈಗೂಡಲು ಪ್ರಭಾವೀ ವ್ಯಕ್ತಿಗಳ ನೆರವು ಪಡೆಯುವಿರಿ. ವ್ಯಾಪಾರ, ವ್ಯವಹಾರಗಳಲ್ಲಿ ಪ್ರತಿ ಸ್ಪರ್ಧಿಗಳು ಹೆಚ್ಚಾಗಲಿದ್ದಾರೆ. ಈ ವಿಷಯದಲ್ಲಿ ಸಾಕಷ್ಟು ಎಚ್ಚರದಿಂದಿರಿ. ಷೇರು ಮಾರುಕಟ್ಟೆಯಲ್ಲಿ ಮಾಡಲಿರುವ ಹೂಡಿಕೆ ನಷ್ಟಕ್ಕೆ ಕಾರಣವಾಗಬಹುದು. ಉದ್ಯಮವನ್ನು ಅಭಿವೃದ್ಧಿಪಡಿಸಲು ಹಲವರಿಂದ ನೆರವನ್ನು ಪಡೆಯುವಿರಿ. ನಿಮ್ಮ ನಡವಳಿ ಸರಿಪಡಿಸಿಕೊಳ್ಳಿ. ಭಾನು-ಬುಧ-ಶುಕ್ರ-ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ಮತ್ತೊಬ್ಬರ ಮೇಲೆ ನಂಬಿಕೆಯಿಂದ ಕೊಟ್ಟ ಹಣವು ಸಕಾಲಕ್ಕೆ ಬರದೇ ಹೋಗಬಹುದು. ಕೃಷಿ ಕಾರ್ಮಿಕರಿಗೆ ಬೇಡಿಕೆ ಬರಲಿದ್ದು, ಸಂಪಾದನೆಯೂ ಹೆಚ್ಚಲಿದೆ. ರಂಗ ನಟರಿಗೆ ಹೆಚ್ಚಿನ ಅವಕಾಶಗಳು ತಾವಾಗಿಯೇ ಬರಲಿವೆ. ವಿದೇಶದಲ್ಲಿ ಅಥವಾ ಬೇರೆ ಸ್ಥಳಗಳಲ್ಲಿ ಓದುತ್ತಿರುವ ಮಕ್ಕಳಿಂದ ಉತ್ತಮ ಫಲಿತಾಂಶ ಬರದೇ ಹೋಗಬಹುದು. ಹಾಗೆಂದ ಮಾತ್ರಕ್ಕೆ ನಿರಾಸೆ ಬೇಡ. ಸ್ವಂತ ಉದ್ಯಮದಲ್ಲಿ ಹೆಚ್ಚಿನ ಬಂಡವಾಳ ಹೂಡುವುದು ಬೇಡ. ತೀರ್ಥಯಾತ್ರೆ ಮಾಡುವ ಸದಾವಕಾಶವನ್ನು ವಿನಾಕಾರಣ ಕಳೆದುಕೊಳ್ಳಬೇಡಿ. ಗುರುಗಳನ್ನು ಸ್ಮರಿಸಿ. ಸೋಮ-ಮಂಗಳ-ಬುಧ-ಶುಭ ದಿನಗಳು,

**ಧನಸ್ಸು (ಮೂಲ, ಪೂರ್ವಾಷಾಢ, ಉತ್ತರಾಷಾಢ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ಮಿಠಾಯಿ ಮಾರಾಟಗಾರರ ವಹಿವಾಟು ಅಧಿಕ ಲಾಭವಾಗಲಿದೆ. ಅನೇಕ ದಿನಗಳಿಂದ ಅನಾರೋಗ್ಯ ಸಮಸ್ಯೆಯನ್ನು ಎದುರಿಸುತ್ತಿದ್ದ ಹಿರಿಯರಿಗೆ ತುಸು ಸುಧಾರಣೆ ಕಂಡುಬರಲಿದೆ. ಹೊಸ ಯೋಜನೆಗಳಿಗೆ ಆರ್ಥಿಕ ಮೂಲವನ್ನು ಕಂಡುಕೊಳ್ಳದೇ ಆರಂಭಿಸಬೇಡಿ. ಸೋದರನಿಗೆ ಕಂಕಣ ಭಾಗ್ಯ ಕೂಡಿಬರಲಿದೆ. ಅಪರೂಪಕ್ಕೆಂಬಂತೆ ಹಳೆಯ ಮಿತ್ರರ ಭೇಟಿಯಾಗಲಿದೆ. ಬಾಲ್ಯದ ನೆನಪು ಮುದ ನೀಡಲಿದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶ ಬರಲಿದೆ. ಕಛೇರಿಯಲ್ಲಿ ಸಹೋದ್ಯೋಗಿಗಳೊಂದಿಗೆ ಸೌಹಾರ್ದತೆಯಿಂದ ನಡೆದುಕೊಂಡಲ್ಲಿ ನಿಮಗೆ ಪ್ರಯೋಜನ. ಭಾನು-ಬುಧ-ಗುರು-ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ವೃತ್ತಿಯಲ್ಲಿ ಕೆಲವೊಂದು ಸನ್ನಿವೇಶಗಳು ನಿಮಗೆ ಪ್ರತಿಕೂಲದಂತೆ ಕಂಡುಬಂದರೂ, ಮುಂದೆ ಅದೇ ಸನ್ನಿವೇಶವು ನಿಮಗೆ ಅನುಕೂಲಕರವಾಗಲಿದೆ. ಬರಬೇಕಾಗಿರುವ ಬಾಕಿ ಹಣ ಕೈ ಸೇರಿದರೂ, ಅದು ಉಳಿಯದೇ ಹೋಗಬಹುದು. ಅಪರಿಚಿತರ ಮರುಳು ಮಾತಿಗೆ ಮೋಸ ಹೋಗಿ ಹಣ ಕಳೆದು ಕೊಳ್ಳುವ ಸಂಭವವಿದೆ. ಅನಿರೀಕ್ಷಿತ ಪ್ರಯಾಣಗಳು ಅನಿವಾರ್ಯವಾಗಲಿದ್ದು, ಪೂರ್ವ ಸಿದ್ಧತೆಯಿಲ್ಲದೇ ಹೊರಡಬೇಡಿ. ಸಂಶೋಧನಾ ರಂಗದಲ್ಲಿರುವವರಿಗೆ ಹೆಚ್ಚಿದ ಪ್ರಗತಿಯಿಂದಾಗಿ ಅತ್ಮವಿಶ್ವಾಸ ಹೆಚ್ಚಲಿದೆ. ವಿಷ್ಣು ಸಹಸ್ರನಾಮ ಪಠಿಸುವುದು ಉತ್ತಮ. ಬುಧ-ಶುಕ್ರ-ಶನಿ-ಶುಭ ದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ತಾಂತ್ರಿಕ ಕ್ಷೇತ್ರದಲ್ಲಿ ನಿಷ್ಣಾತರಾದವರಿಗೆ ಬೇಡಿಕೆ ಹೆಚ್ಚಿದರೂ, ಅದು ಕರಾರುಬದ್ಧವಾಗಿದ್ದಲ್ಲಿ ಸ್ವಲ್ಪ ಯೋಚಿಸುವುದು ಮೇಲು. ಸಿನಿಮಾ ಕಲಾವಿದರಿಗೆ ಅನಿರೀಕ್ಷಿತವಾಗಿ ಬೇಡಿಕೆ ಹೆಚ್ಚಲಿದೆ. ಸಂದರ್ಭವನ್ನು ಜಾಣ್ಮೆಯಿಂದ ನಿಭಾಯಿಸುವುದನ್ನು ಕಲಿಯಿರಿ. ಕ್ರೀಡಾಪಟುಗಳಿಗೆ ಉತ್ತಮ ತರಬೇತಿದಾರರು ದೊರೆಯುವರು. ಸಾಧನೆಯೊಂದಿಗೆ ಸಂಗೀತವನ್ನು ಕಲಿಯುವುದು ಮೇಲು. ಮಡದಿಯ ಆರೋಗ್ಯದಲ್ಲಿ ಸಾಕಷ್ಟು ಸುಧಾರಣೆ ಕಂಡುಬರಲಿದೆ. ಮಕ್ಕಳ ಏಳಿಗೆಗೆ ಸತತ ಶ್ರಮಿಸುವಿರಿ. ಗೋ ಸೇವೆ ಮಾಡಿರಿ. ಸೋಮ-ಬುಧ-ಶನಿ-ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ಸಂತೋಷ ಸಮಾರಂಭಗಳಲ್ಲಿ ಭಾಗವಹಿಸುವ ಹೇರಳ ಅವಕಾಶಗಳು ಬರಲಿವೆ, ಆದರೆ ಅವು ನಿಮ್ಮ ಆರೋಗ್ಯದ ಮೇಲೆ ಅಡ್ಡ ಪರಿಣಾಮ ಬೀರದಂತೆ ಎಚ್ಚರವಹಿಸಿ. ರಾಜಕಾರಣಿಗಳು ಸಾರ್ವಜನಿಕವಾಗಿ ಮಾತನಾಡುವಾಗ ಸಾಕಷ್ಟು ಎಚ್ಚರ ವಹಿಸುವುದು ಮೇಲು. ಇಲ್ಲವಾದಲ್ಲಿ ನಿಮ್ಮ ರಾಜಕೀಯ ಭವಿಷ್ಯವೇ ಬುಡಮೇಲಾಗಬಹುದು. ಆಡುವ ಮಾತಿನಲ್ಲಿ ಹಾಗೂ ನಡಾವಳಿಯಲ್ಲಿ ಸಾಕಷ್ಟು ಸುಧಾರಣೆ ಮಾಡಿಕೊಳ್ಳದೇ ಹೋದಲ್ಲಿ ಕುಟುಂಬದಲ್ಲಿರುವ ಬಾಂಧವ್ಯಕ್ಕೆ ಧಕ್ಕೆ ಬರಬಹುದು. ಬೆಂಕಿಯೊಂದಿಗೆ ಕೆಲಸ ಮಾಡುವವರು ಎಚ್ಚರದಿಂದಿರುವುದು ಉತ್ತಮ. ಭಾನು-ಸೋಮ-ಗುರು-ಶುಭ ದಿನಗಳು.

**ವಿಶೇಷ ದಿನಗಳು :**

**ದಿನಾಂಕ: 17.07.2023 ಸೋಮವಾರ ಭೀಮನ ಅಮಾವಾಸೆ (ದಿವಸೀ ಗೌರಿಪೂಜೆ) 18.7.2023 ನೇ ಮಂಗಳವಾರ ಅಧಿಕ ಶ್ರಾವಣ ಆರಂಭ.**

# 'ಚಂದ್ರಯಾನ' : ವಿಜ್ಞಾನಿಗಳ ಪೂಜೆ ಸಲ್ಲಿಕೆ ವಿಪರ್ಯಾಸ



**(1ನೇ ಪುಟದಿಂದ)** ಹೋರಾಡಿದರು.

ಅಲ್ಲದೇ, ಇಂಥ ಮೌಢ್ಯಗಳನ್ನು ನಿರಂತರ ವಾಗಿ ವಿರೋಧಿಸುವ ಸಲುವಾಗಿಯೇ ಅವರು ಇಂದಿನ ಕೊಟ್ಟೂರು ತಾಲ್ಲೂಕಿನ ಉಜ್ಜಯಿನಿ ಯಲ್ಲಿ 'ತರಳಬಾಳು ಪೀಠ' ವನ್ನು ಸ್ಥಾಪಿಸಿದರು.

ಆ ಪೀಠದ ಮೇಲೆ ತೆಲಗುಬಾಳು ಸಿದ್ಧಯ್ಯನನ್ನು ಕೂರಿಸಿ 'ತರಳಾ ಬಾಳು' ಎಂದು ಆಶೀರ್ವದಿಸಿದರು. ಅಂದಿನಿಂದ ಈ ಪೀಠ ತರಳಬಾಳು ಪೀಠವೆಂದು ಖ್ಯಾತಿ ಪಡೆದಿದೆ. ಆ ಪೀಠದಲ್ಲಿ ಬಂದ ಎಲ್ಲ ಗುರುವರ್ಯರು ಮೌಢ್ಯ ವಿರೋಧಿ ಪರಂಪರೆಯನ್ನು ಮುಂದುವರೆಸಿ ಕೊಂಡು ಬರುತ್ತಿದ್ದಾರೆ ಎಂದರು.

ಹಿರಿಯ ಕವಿ, ಸಾಹಿತಿ ಚಂದ್ರಶೇಖರ ತಾಳ್ಯ ಮಾತನಾಡಿ, ಶ್ರೀ ಶಿವಕುಮಾರ ಸ್ವಾಮಿಗಳವರು ಮೊದಲ ಬಾರಿಗೆ ಸಿರಿಗೆರೆಯಲ್ಲಿ 'ದಂದಣ ದತ್ತಣ ಗೋಷ್ಠಿ'ಯನ್ನು ಆರಂಭಿಸಿದರು.

ಅವರ ಗರಡಿಯಲ್ಲೇ ಪಳಗಿದ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಅತ್ಯಂತ ನಿಷ್ಠೂರವಾಗಿ, ವೈಚಾರಿಕವಾಗಿ ನಡೆದು ಕೊಳ್ಳುವ ಸ್ವಾಮಿಗಳಲ್ಲಿ ಅಪರೂಪದ ಸ್ವಾಮಿಗಳು ಎಂದರು.

ಶ್ರೀ ಶಿವಕುಮಾರ ಸ್ವಾಮೀಜಿ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಸಿ.ಕೆ.ಸ್ವಾಮಿ ಮಾತ ನಾಡಿ, ಮಾನವೀಯ ಮೌಲ್ಯಗಳನ್ನುರೂಢಿಸಿಕೊ ಳ್ಳುವ ನಿಟ್ಟಿನಲ್ಲಿ ವಿದ್ಯಾರ್ಥಿಗಳು ನಿರಂತರ ಪ್ರಯತ್ನ ಶೀಲರಾಗಿರಬೇಕು. ಹೊಟ್ಟೆಯಿದ್ದವನು ಉಣ್ಣಬೇಕು, ನೆತ್ತಿಯಿದ್ದವನು ಓದಬೇಕು. ರಟ್ಟೆ ಯಿದ್ದವನು ದುಡಿಯಬೇಕು ಎಂದು ಶಿವ ಕುಮಾರ ಶ್ರೀಗಳು ಹೇಳುತ್ತಿದ್ದರು. ಅವರು ಕಾಲ, ಕಾಸು, ಕಾಯಕ, ದಾಸೋಹಕ್ಕೆ ಎಲ್ಲಿಲ್ಲದ ಮಹತ್ವ ನೀಡಿದ್ದರು. ಅವರ ನಡೆಯನ್ನು ಪಂಡಿತಾರಾಧ್ಯ ಶ್ರೀಗಳೂ ಮುಂದುವರೆಸಿದ್ದಾರೆ ಎಂದರು.

ವಿದ್ಯಾರ್ಥಿ ಭಾಷಣಕಾರರಾದ ಎಂ ಪ್ರತೀಕ್ಷಾ, ವಿ. ಧನುಶ್ರೀ, ಕೆ. ಚಂದನ, ಆರ್.ನೂತನ್, ಎಸ್. ಎಸ್. ಮಲ್ಲಿಕಾರ್ಜುನ, ನಿಖಿಲ್, ಪಿ. ಮಲ್ಲಿಕಾರ್ಜುನ ಇವರು ತರಳಬಾಳು ಗುರು ಪರಂಪರೆ ಕುರಿತು ಮಾತ ನಾಡಿದರು. ನಿಸರ್ಗ ಅತಿಥಿಗಳ ಪರಿಚಯ ಮಾಡಿಕೊಟ್ಟರು.

ಶಿಕ್ಷಕಿ ಚಂದ್ರಮ್ಮ ನೇತೃತ್ವದಲ್ಲಿ ಶಾಲಾ ಮಕ್ಕಳು ವಚನ ಗೀತೆಗಳನ್ನು ಹಾಡಿದರು. ಎಲ್. ಎಸ್. ವೇದಾಂತ್ ಸ್ವಾಗತಿಸಿದರು. ಎ.ಪಿ. ಭೂಮಿಕಾ ಮತ್ತು ಎಸ್.ಎಸ್. ಅರವಿಂದ್ ಕಾರ್ಯಕ್ರಮ ನಿರೂಪಿಸಿದರು. ಕೆ. ಚಂದನಾ ವಂದಿಸಿದರು. ಶಾಲಾ ಮಕ್ಕಳು ಶಿವಕುಮಾರ ಶ್ರೀಗಳವರನ್ನು ಕುರಿತಂತೆ ರಚಿಸಿದ 'ಸಿರಿಗೆರೆಯ ಶ್ರೀಮಂತ ತರಳಬಾಳು ಧೀಮಂತ...' ಎನ್ನುವ ಗೀತೆಗೆ ಆಕರ್ಷಕ ನೃತ್ಯ ಮಾಡಿದರು.

# 19ರಿಂದ ಗೃಹ ಲಕ್ಷ್ಮಿನೋಂದಣಿ

**(1ನೇ ಪುಟದಿಂದ)** ಸಮಯ ಮತ್ತು ಸ್ಥಳವನ್ನು 1902ಕ್ಕೆ ಕರೆ ಮಾಡಿ ಇಲ್ಲವೇ 8147500500 ನಂಬರ್‌ಗೆ ಎಸ್‌ಎಂಎಸ್ ಇಲ್ಲವೇ ವಾಟ್ಸಾಪ್ ಮೂಲಕ ಸಂದೇಶ ಕಳುಹಿಸಿ, ಮಾಹಿತಿ ಪಡೆಯಲಾಗುವುದು ಎಂದು ತಿಳಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರ ವಹಿಸಿಕೊಂಡ ತಕ್ಷಣವೇ ಪಕ್ಷ ಜನತೆಗೆ ನೀಡಿದ್ದ ಭರವಸೆಗಳನ್ನು ಈಡೇರಿಸುವ ನಿರ್ಧಾರ ಕೈಗೊಂಡರು. ತದನಂತರ ಆದೇಶವೂ ಹೊರಬಿದ್ದಿತು. ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್‌ಗಳಲ್ಲಿ ವಿದ್ಯಾರ್ಥಿನಿಯರು ಮತ್ತು ಮಹಿಳೆಯರು ಉಚಿತವಾಗಿ ಪ್ರಯಾಣಿಸುವ ಶಕ್ತಿ ಯೋಜನೆ ಈಗಾಗಲೇ ಜಾರಿಗೊಂಡಿದೆ. ಬಿಪಿಎಲ್ ಪಡಿತರ ಚೀಟಿದಾರರಿಗೆ ಹೆಚ್ಚುವರಿಯಾಗಿ ಪ್ರತಿ ಯುನಿಟ್‌ಗೆ ಐದು ಕೆಜಿ ಅಕ್ಕಿ ಬದಲು 170 ರೂ. ಪಡಿತರದಾರರ ಮುಖ್ಯಸ್ಥರ ಖಾತೆಗೆ ಸಂದಾಯವಾಗುತ್ತದೆ.

ಇನ್ನು ಗೃಹಜ್ಯೋತಿ ಯೋಜನೆಯಡಿ ಮಾಸಿಕ 200 ಯುನಿಟ್ ವಿದ್ಯುತ್ ಉಚಿತ ನೀಡುವ ಯೋಜನೆ ಜುಲೈ 1 ರಿಂದ ಜಾರಿಗೊಂಡಿದ್ದರೂ, ಆಗಸ್ಟ್ ತಿಂಗಳಲ್ಲಿ ಫಲಾನುಭವಿಗಳಿಗೆ ಅದರ ಪ್ರತಿಫಲ ದೊರೆಯುತ್ತದೆ. ಇದೀಗ ಭಾಗ್ಯಲಕ್ಷ್ಮಿ ಯೋಜನೆಗೆ ಚಾಲನೆ ನೀಡುತ್ತಿರುವ ಸರ್ಕಾರ ಯುವ ನಿಧಿ ಯೋಜನೆ ಯನ್ನು ನವೆಂಬರ್ ತಿಂಗಳಲ್ಲಿ ಅನುಷ್ಠಾನಗೊಳಿಸಲು ಸಿದ್ದತೆ ಮಾಡಿಕೊಂಡಿದೆ.

# ಗಗನ ಯಾನಕ್ಕೆ ಉತ್ತೇಜನ

**(1ನೇ ಪುಟದಿಂದ)** ದಿನಗಳ ಕಾಲ 400 ಕಿ.ಮೀ.ಗಳ ಕಕ್ಷೆಗೆ ಕಳಿಸುವ ಹಾಗೂ ಸುರಕ್ಷಿತವಾಗಿ ವಾಪಸ್ ಕರೆಸಿಕೊಳ್ಳುವ ಮಹತ್ವಾಕಾಂಕ್ಷಿ ಗಗನಯಾನ ಯೋಜನೆಯಲ್ಲಿ ಇಸ್ರೋ ತೊಡಗಿಕೊಂಡಿದೆ.

ಜುಲೈ 14ರಂದು ಚಂದ್ರಯಾನ - 3 ಉಡಾವಣೆ ಕೈಗೊಂಡ 44.3 ಮೀಟರ್ ಎತ್ತರದ ಎಲ್.ವಿ.ಎಂ.3 ರಾಕೆಟ್ ಅನ್ನು ಮಾನವ ದರ್ಜೆಯೊಂದಿಗೆ ಗಗನಯಾನಕ್ಕೆ ಬಳಸಿಕೊಳ್ಳಲಾಗುವುದು ಎಂದು ಇಲ್ಲಿನ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದ ವಿಜ್ಞಾನಿಗಳು ಹೇಳಿದ್ದಾರೆ. ಈ ರಾಕೆಟ್ ಘನ, ದ್ರವ ಹಾಗೂ ಕ್ರಯೋಜನಿಕ್ ಹಂತಗಳನ್ನು ಹೊಂದಿದೆ. ಎಲ್.ವಿ.ಎಂ.3 ಇಸ್ರೋದ ಅತಿ ಭಾರ ಹೊರುವ ರಾಕೆಟ್ ಆಗಿದೆ. ಇದು 4 ಸಾವಿರ ಕೆಜಿ ತೂಕದ ಹೊರೆಯನ್ನು ಭೂಸ್ಥಿರ ಕಕ್ಷೆಗೆ ಕಳಿಸುವ ಸಾಮರ್ಥ್ಯ ಹೊಂದಿದೆ.

# ಬಾಡಾ : ಹಡಪದ ಅಪ್ಪಣ್ಣ ಜಯಂತಿ



ದಾವಣಗೆರೆ ತಾಲ್ಲೂಕಿನ ಬಾಡ ಗ್ರಾಮ ಪಂಚಾಯಿತಿ ಆವರಣದಲ್ಲಿ ಇಂದು ಬೆಳಿಗ್ಗೆ 11 ಕ್ಕೆ ಶ್ರೀ ನಿಜ ಸುಖಿ ಹಡಪದ ಅಪ್ಪಣ್ಣನವರ 889ನೇ ಜಯಂತ್ಯೋತ್ಸವವನ್ನು ಶ್ರೀ ಹಡಪದ ಅಪ್ಪಣ್ಣ ಸೇವಾ ಸಮಿತಿಯಿಂದ ಹಮ್ಮಿಕೊಳ್ಳಲಾಗಿದೆ.

ಸಾನ್ನಿಧ್ಯವನ್ನು ಶ್ರೀ ಅನ್ನದಾನಿ ಭಾರತಿ ಹಡಪದ ಅಪ್ಪಣ್ಣ ಮಹಾ ಸ್ವಾಮೀಜಿ (ಸುಕ್ಷೇತ್ರ ತಂಗಡಗಿ ಮಠ, ಮುದ್ದೇಬಿಹಾಳ್ ತಾಲ್ಲೂಕು) ವಹಿಸುವರು. ಕಾರ್ಯಕ್ರಮವನ್ನು ಶಾಸಕ ಕೆ.ಎಸ್. ಬಸವಂತಪ್ಪ ಉದ್ಘಾಟಿಸುವರು. ಬಿ.ಎನ್. ಮಹಾರುದ್ರಪ್ಪ ಅಧ್ಯಕ್ಷತೆ ವಹಿಸುವರು. ಕಾರ್ಯಕ್ರಮದಲ್ಲಿ ನಿವೃತ್ತ ಉಪನ್ಯಾಸಕ ಡಾ. ಎನ್.ಜೆ. ಶಿವಕುಮಾರ್ ಅನುಭಾವ ನಡೆಸಿ ಕೊಡುವರು.

ಮುಖ್ಯ ಅತಿಥಿಗಳಾಗಿ ಶ್ರೀಮತಿ ಶೈಲಜಾ ಬಸವರಾಜ್, ಹೆಚ್. ಶಶಿಧರ್, ಶೈಲಜಾ ಚಂದ್ರಪ್ಪ, ಎಂ.ಡಿ. ಸುರೇಶ್, ಜಿ.ಜೆ. ನಿರಂಜನಮೂರ್ತಿ, ಮಂಜುಳಮ್ಮ ಜಿ.ಆರ್. ರುದ್ರಪ್ಪ, ಸುಂದರಮ್ಮಮಂಜಪ್ಪ, ಅನುಸೂಯಮ್ಮಸೋಮಶೇಖರಪ್ಪ, ರೇಣುಕ ಬಿ.ಜಿ. ನಾಗರಾಜ್, ಬಿ.ಜಿ. ಶಾಂತಕುಮಾರ್, ಡಿ.ಹೆಚ್. ಪ್ರಕಾಶ್, ರಾಜಪ್ಪ, ಶಾಂತಕುಮಾರಿ ಶ್ರೀನಿವಾಸ್, ರೇಣುಕಮ್ಮ ಕುಬೇಂದ್ರಪ್ಪ ಆಗಮಿಸುವರು.

ವಿಶೇಷ ಆಹ್ವಾನಿತರು : ಡಿ. ಪ್ರಕಾಶ್, ಆರ್.ಎಸ್. ಗುರುಶಾಂತಪ್ಪ, ಜಿ.ಆರ್. ರುದ್ರಪ್ಪ, ಬಿ.ಕೆ. ಗುರುಶಾಂತಪ್ಪ, ಜಿ.ಎಸ್. ರೇವಣಸಿದ್ದಪ್ಪ, ಶಿನಾನಂದಪ್ಪ, ಬಿ.ಕೆ. ಗಿರಿದಾಸಪ್ಪ, ಮಡಿವಾಳರ ಮಂಜಮ್ಮ, ಗಣೇಶಯ್ಯ, ಬಸವಲಿಂಗಪ್ಪ, ಶಿಲ್ಪಾಚಾರಿ.

# 'ಪಂಚಮಸಾಲಿ' ವಿದ್ಯಾರ್ಥಿಗಳಿಗೆ ಇಂದು ಪುರಸ್ಕಾರ

ದಾವಣಗೆರೆ,ಜು.15- ವೀರಶೈವ ಲಿಂಗಾಯತ ಪಂಚಮಸಾಲಿ ಸಂಘದ ಜಿಲ್ಲಾ ಘಟಕ, ಹರ ಸೇವಾ ಸಂಸ್ಥೆ ಹಾಗೂ ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠ ಹರ ಕ್ಷೇತ್ರ (ಹರಿಹರ) ಇವರ ಸಹಯೋಗದಲ್ಲಿ ನಾಳೆ ದಿನಾಂಕ 16 ರ ಭಾನುವಾರ ಬೆಳಿಗ್ಗೆ 10 ಗಂಟೆಗೆ ನಗರದ ಶಿವ ಪಾರ್ವತಿ ಕಲ್ಯಾಣ ಮಂಟಪದಲ್ಲಿ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ಸಮಾಜದ ಗಣ್ಯರಿಗೆ ಸನ್ಮಾನ ಸಮಾರಂಭ ಏರ್ಪಡಿಸಲಾಗಿದೆ ಎಂದು ಸಂಘದ ಜಿಲ್ಲಾಧ್ಯಕ್ಷ ಬಿ.ಸಿ.ಉಮಾಪತಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪಂಚಮಸಾಲಿ ಜಗದ್ಗುರು ಶ್ರೀ ವಚನಾ ನಂದ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಸಂಘ ದ ಜಿಲ್ಲಾಧ್ಯಕ್ಷ ಬಿ.ಸಿ. ಉಮಾಪತಿ ಅಧ್ಯಕ್ಷತೆ ವಹಿ ಸುವರು. ಶಾಸಕ ಶಾಮನೂರು ಶಿವಶಂಕರಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ಸಿದ್ಧಗಂಗಾ ಪಿಯು ಕಾಲೇಜಿನ ನಿರ್ದೇಶಕ ಡಾ. ಡಿ.ಎಸ್.ಜಯಂತ್ ಮತ್ತು ಎವಿಕೆ ಕಾಲೇಜಿನ ಉಪನ್ಯಾಸಕರಾದ ಡಾ. ಗೀತಾ ಬಸವರಾಜ್ ಉಪನ್ಯಾಸ ನೀಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ವೀರಶೈವ ಲಿಂಗಾಯತ ಪಂಚಮಸಾಲಿ ಸಂಘದ ವಿಜಯನಗರ ಜಿಲ್ಲಾಧ್ಯಕ್ಷ ಪ್ರಕಾಶ್ ಪಾಟೀಲ್, ಜ್ಯೋತಿ ಗ್ಯಾಸ್ ಮಾಲೀಕರಾದ ಅಂದನೂರು ಆನಂದ, ಉದ್ಯಮಿಗಳಾದ ಎಸ್.ಕೆ. ಶ್ರೀಧರ, ಕಂಚಿಕೇರಿ ಮಹೇಶ್, ಎನ್.ಎಂ. ಕಡೇಕೊಪ್ಪ ರಾಜಣ್ಣ, ಕೀಲು, ಮೂಳೆ ತಜ್ಞ ಡಾ. ಎ.ಕೆ. ರುದ್ರಮುನಿ, ಈಶ್ವರ ರೇಡಿಯೋ ಮಾಲೀಕ ಎ.ಎಸ್. ರಾಜು ಭಾಗವಹಿಸಲಿದ್ದಾರೆ.

ವಿವಿಧ ಕ್ಷೇತ್ರಗಳ ಸಾಧಕರಾದ ದಾವಣಗೆರೆ ವಿವಿ ಗಣಿತಶಾಸ್ತ್ರ ವಿಭಾಗದ ಪ್ರೊ. ಯು.ಎಸ್. ಮಹಾಬಲೇಶ್, ಜಜಮು ವೈದ್ಯಕೀಯ ಕಾಲೇಜಿನ ಡಾ. ಅನುರೂಪ, ಮಹಿಳಾ ಉದ್ಯಮಿ ನಾಗರತ್ನ ಎ.ಜಿ. ಪೂಜಾರ್ ಹಾಗೂ ಸಮಾಜದ ಮುಖಂಡರಾದ ಮೃತ್ಯುಂಜಯ ಬಣಜಾರ್, ಕಂದನಕೋವಿ ಶಿವಕುಮಾರ್, ಬಿ.ಯು. ಅನೂಪ್ (ಮುದ್ದಳ್ಳಿ), ಬೆಳ್ಳೂಡಿ ಎಸ್. ವೀರಣ್ಣ, ಹೆಚ್.ಜಿ. ಶಂಭುಲಿಂಗಪ್ಪ, ಎಂ.ವಿ. ವಿಜಯಕುಮಾರ್, ಅಂದನೂರು ಕೆ. ವಾಗೀಶ್ ಅವರನ್ನು ಸನ್ಮಾನಿಸಲಾಗುವುದು.

2022-23 ನೇ ಸಾಲಿನಲ್ಲಿ ಶೇ. 90 ಕ್ಕಿಂತ ಹೆಚ್ಚು ಅಂಕ ಗಳಿಸಿದ ಪಂಚಮಸಾಲಿ ಸಮಾಜದ ಎಸ್ಸೆಸ್ಸೆಲ್ಸಿಯ 56 ಹಾಗೂ ಪಿಯುಸಿಯ 40 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು. ವಿಶೇಷವಾಗಿ 20 ಟಾಪರ್‌ಗಳಿಗೆ ಸಮಾಜದ ವತಿಯಿಂದ ಬೆಳ್ಳಿ ಚೌಕ ನೀಡಲಾಗುವುದು. ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿಯ 100 ವಿದ್ಯಾರ್ಥಿಗಳಿಗೆ ಪದಕ, ಧನ ಸಹಾಯ ಹಾಗೂ ಪ್ರಮಾಣ ಪತ್ರ ನೀಡಿ ಪುರಸ್ಕರಿಸಲಾಗುವುದು ಎಂದು ಉಮಾಪತಿ ಹೇಳಿದರು.

ಹರಿಹರ ಲಿಂಗಾಯತ ಪಂಚಮಸಾಲಿ ಪೀಠದಲ್ಲಿ ನಿತ್ಯ ದಾಸೋಹ ನಡೆಯುತ್ತಿದ್ದು, ಸಮಾಜದ 46 ಬಡ ವಿದ್ಯಾರ್ಥಿಗಳಿಗೆ ಉಚಿತ ವಸತಿ ಹಾಗೂ ಊಟದ ವ್ಯವಸ್ಥೆಯನ್ನು ಸಹ ಕಲ್ಪಿಸಲಾಗಿದೆ ಎಂದು ಅವರು ವಿವರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ಸಿ. ಕಾಶಿನಾಥ್, ಉಪಾಧ್ಯಕ್ಷ ಎಂ. ದೊಡ್ಡಪ್ಪ, ತಾಲ್ಲೂಕು ಅಧ್ಯಕ್ಷ ಎಸ್. ಮಲ್ಲಿನಾಥ್, ಹೆಚ್.ಎನ್. ನಾಗರಾಜ್, ಲಿಂಗರಾಜ್ ಉಪಸ್ಥಿತರಿದ್ದರು.

# ಮುಂಗಾರು ಅಧಿವೇಶನದಲ್ಲಿ ಮಣಿಪುರದ ಚರ್ಚೆಗೆ ಆಗ್ರಹ

ನವದೆಹಲಿ, ಜು. 15 - ಮುಂಬರುವ ಮುಂಗಾರು ಅಧಿವೇಶನದಲ್ಲಿ ಮಣಿಪುರ ಪರಿಸ್ಥಿತಿ ಕುರಿತು ಚರ್ಚೆಗೆ ಬೇಡಿಕೆ ಮುಂದಿಡುವುದಾಗಿ ಕಾಂಗ್ರೆಸ್ ತಿಳಿಸಿದೆ.

ರೈಲ್ವೆ ಸುರಕ್ಷತೆ, ಅದಾನಿ ವಿಷಯ, ಹಣದುಬ್ಬರ, ಜಿ.ಎಸ್. ಟಿ.ಯನ್ನು ಅಕ್ರಮ ಹಣ ತಡೆ ಕಾಯ್ದೆಯಡಿ ತಂದಿರುವ ವಿಷಯ ಹಾಗೂ ಬಿಜೆಪಿ ಸಂಸದ ಬ್ರಿಜ್ ಭೂಷಣ್ ಶರಣ್ ಸಿಂಗ್ ವಿರುದ್ಧ ಕೇಳಿ ಬಂದಿರುವ ಲೈಂಗಿಕ ಶೋಷಣೆಯ ಪ್ರಕರಣಗಳನ್ನೂ ಪ್ರಸ್ತಾಪಿಸುವುದಾಗಿ ಕಾಂಗ್ರೆಸ್ ಹೇಳಿದೆ.

# 22 ಸಾವಿರ 100 ಪರ್ಸೆಂಟೈಲ್

**(1ನೇ ಪುಟದಿಂದ)** 100 ಪರ್ಸೆಂಟೈಲ್ ಪಡೆದಿದ್ದಾರೆ. ಇಂಗ್ಲಿಷ್‌ನಲ್ಲಿ ಅತಿ ಹೆಚ್ಚು ವಿದ್ಯಾರ್ಥಿಗಳು ಗರಿಷ್ಠ ಅಂಕ ಪಡೆದಿದ್ದಾರೆ. ಜೀವಶಾಸ್ತ್ರ ಹಾಗೂ ಅರ್ಥಶಾಸ್ತ್ರ ನಂತರದ ಸ್ಥಾನಗಳಲ್ಲಿವೆ.

ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯು ಸಿಯುಇಟಿ - ಯುಜಿ ಫಲಿತಾಂಶವನ್ನು ಶನಿವಾರ ಪ್ರಕಟಿಸಿದೆ. 11.11 ಲಕ್ಷ ಅಭ್ಯರ್ಥಿಗಳು ಈ ಪರೀಕ್ಷೆಗೆ ಹಾಜರಾಗಿದ್ದರು.

ಒಟ್ಟಾರೆ 22,836 ವಿದ್ಯಾರ್ಥಿಗಳು 100 ಪರ್ಸೆಂಟೈಲ್ ಪಡೆದಿದ್ದಾರೆ. ಕಳೆದ ವರ್ಷ ಇವರ ಸಂಖ್ಯೆ 21, 159 ಆಗಿತ್ತು.

# ಅಬುಧಾಬಿಯಲ್ಲಿ ಐಐಟಿ ಕ್ಯಾಂಪಸ್

ನವದೆಹಲಿ, ಜು. 15 - ಅಬು ಧಾಬಿಯಲ್ಲಿ ಐಐಟಿ - ದೆಹಲಿ ಕ್ಯಾಂಪಸ್ ತೆರೆಯಲು ಒಪ್ಪಂದ ಮಾಡಿಕೊಳ್ಳಲಾಗಿದೆ. ಕೇಂದ್ರ ಶಿಕ್ಷಣ ಸಚಿವಾಲಯ ಹಾಗೂ ಅಬು ಧಾಬಿಯ ಶಿಕ್ಷಣ ಮತ್ತು ಜ್ಞಾನ ಇಲಾಖೆ ನಡುವೆ ಈ ಕುರಿತ ಒಪ್ಪಂದ ವಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಯು.ಎ.ಇ. ಭೇಟಿ ಸಂದರ್ಭದಲ್ಲಿ ಒಪ್ಪಂದಕ್ಕೆ ಸಹಿ ಹಾಕಲಾಗಿದೆ. ಮುಂದಿನ ವರ್ಷದಿಂದ ಅಬು ಧಾಬಿಯ ಕ್ಯಾಂಪಸ್‌ನಲ್ಲಿ ಸ್ನಾತಕೋತ್ತರ ಅಧ್ಯಯನ ಆರಂಭವಾಗಲಿದೆ.


SUPREET MOTORS — BOSCH Service

ಪ್ರಿಯ ಗ್ರಾಹಕರೇ, ಇಂದೇ ಸಂಪರ್ಕಿಸಿ...

**ನಮ್ಮ ಸುಪ್ರೀತ್ ಮೋಟಾರ್ಸ್**

ಕೇವಲ 2000/- ಮೆಂಬರ್‌ಶಿಪ್‌ನಲ್ಲಿ 20,000/- ಮೌಲ್ಯದ ಸರ್ವೀಸ್ ಉಚಿತ ಪಡೆದುಕೊಳ್ಳಿ!

ನಮ್ಮ ಗ್ರಾಹಕರು, ನಮ್ಮ ಗೌರವ !

ಸಂಪರ್ಕಿಸಿ: 9986132850/8073847422

ಶಿರಾಮಗೊಂಡನಹಳ್ಳಿ ಹತ್ತಿರ, ಚನ್ನಗಿರಿ ರೋಡ್, ದಾವಣಗೆರೆ.

*T&C Apply

+91 81235 06863 | 93800 15165 | supreetmotorsdvg@gmail.com

#5450/A3, Near Shiramagondanahalli, Hadadi Road, Davanagere-57005

**ಡೀಲರ್‌ಶಿಪ್ ಅವಕಾಶ**

ದಾವಣಗೆರೆ ನಗರ, ಚನ್ನಗಿರಿ, ಹೊನ್ನಾಳಿಗೆ ಗೋ ಗ್ಯಾಸ್ ವಾಣಿಜ್ಯ ಬಳಕೆ (ಕಮರ್ಷಿಯಲ್) ಗ್ಯಾಸ್ ಸಿಲಿಂಡರ್ ವಿತರಕರು ಬೇಕಾಗಿದ್ದಾರೆ.

ಕಡಿಮ ಬಂಡವಾಳ / ಆಕರ್ಷಕ ಲಾಭ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ.

93800 15165 / 93800 04019

ಕಮರ್ಷಿಯಲ್ / ಗೂಡ್ಸ್ ಆಟೋ ಹೊಂದಿದವರಿಗೆ ಮೊದಲ ಆದ್ಯತೆ.

**ಯಶಸ್ವೀ 75ನೇ ಪ್ರದರ್ಶನದತ್ತ ಸಾಗುತ್ತಿರುವ**

ಶ್ರೀ ಸಂತ ಶರೀಫ ಶಿವಯೋಗಿ ನಾಟ್ಯಸಂಘ (ರಿ.) ತೆಗ್ಗಿಹಳ್ಳಿ ಇವರಿಂದ

ದಾವಣಗೆರೆ ಪಿ.ಬಿ. ರಸ್ತೆ, ಟಿ.ಎಂ. ವಿನಾಯಕ ಪಿಎಂಪಿಎಸ್. ಕಾಂಪೌಂಡಿನಲ್ಲಿ

ಮಧ್ಯಾಹ್ನ 3 ಗಂಟೆಗೆ, ಸಂಜೆ 6.15ಕ್ಕೆ — ಪ್ರತಿದಿನ 2 ಪ್ರದರ್ಶನಗಳು



**ಬಳೆಗಾರ ಹನುಮವ್ವ**

ಹೆಣ್ಣುಮಕ್ಕಳು ಅತ್ಯವಶ್ಯಕವಾಗಿ ನೋಡುವಂತಹ ನಾಟಕ

ಈ ನಾಟಕದಲ್ಲಿ ದಾನಮ್ಮ ದೇವಿ ಚಿತ್ರದಲ್ಲಿ ನಟಿಸಿದ ಆಶಾರಾಣಿ ಬಿಜಾಪುರ ಇವರು ಮುಖ್ಯ ಪಾತ್ರದಲ್ಲಿದ್ದಾರೆ.

ಟಿಕೆಟ್ ದರ ಖರ್ಚು 100/-

ಮಾಲೀಕರು : ಖತಾಲಸಾಬ ಆರ್. ಬಣಗಾರ

ಸಂಚಾಲಕರು : ಆಶಾರಾಣಿ ಬಿಜಾಪುರ

**JOB VACANCY**

1. Accounts Manager :
   Tally, Min. 3yrs Experience
2. Tractor Showroom Receptionist & DMS Operator:
   Min. 2 yrs Experience
3. Sales Executive for 2w/3w vehicles :
   Computer Skills Required & Min. 2 yrs Experience.

**Agadi Motors Private Limited**

WhatsApp your Resume to 86183 24082

**ಶ್ರೀ ಹುಲ್ಲುಮನೆ ಸೌಹಾರ್ದ ಸಹಕಾರ ಲಿ.**

#173/16, ಕಾಲೇಜ್ ರಸ್ತೆ, ನಿಟುವಳ್ಳಿ, ದಾವಣಗೆರೆ-4.

ದೂರವಾಣಿ ಸಂಖ್ಯೆ : 08192 260019

**ಅಧಿಸೂಚನೆ :**

ಈ ಕೆಳಕಂಡ ತಾತ್ಕಾಲಿಕ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ

| | | | |
|---|---|---|---|
| 01) | ಮುಖ್ಯಕಾರ್ಯನಿರ್ವಾಹಕ ಅಧಿಕಾರಿ (ಬ್ಯಾಂಕಿಂಗ್ & ಆಡಳಿತ ಕ್ಷೇತ್ರದಲ್ಲಿ 5 ವರ್ಷಗಳ ಅನುಭವ) | ಹುದ್ದೆಗಳು - 01 | BE., MBA, M.Com., |
| 02) | ಮ್ಯಾನೇಜರ್ (ನಿವೃತ್ತ ಬ್ಯಾಂಕ್ ಮ್ಯಾನೇಜರ್) | ಹುದ್ದೆಗಳು - 02 | B.com., BBM., MBA., |
| 03) | ಅಭಿವೃದ್ಧಿ ಅಧಿಕಾರಿಗಳು (ಬ್ಯಾಂಕಿಂಗ್) | ಹುದ್ದೆಗಳು - 10 | SSLC, PUC, Degree |
| 04) | ಮಾರ್ಕೆಟಿಂಗ್ ಆಫೀಸರ್ (ಪೈಪ್ ಡಿವಿಜನ್) | ಹುದ್ದೆಗಳು - 05 | Degree |

ಸ್ವಂತ ವಾಹನವುಳ್ಳ ಅಭ್ಯರ್ಥಿಗಳಿಗೆ ಆದ್ಯತೆ. ಅರ್ಜಿ ಸಲ್ಲಿಸುವ ವಿಧಾನ

email ID : hullumanesouhardha@gmail.com

ಆಡಳಿತ ಮಂಡಳಿ


**ಕಾಣೆಯಾಗಿದ್ದಾನೆ**



ದಿನಾಂಕ 13.07.2023ರ ಗುರುವಾರ ಬೆಳಿಗ್ಗೆ 9.30ರ ಸಮಯದಲ್ಲಿ **ಪ್ರಮೋದ್ ಎ.ಟಿ.** ತಂದೆ : **ಅಶೋಕ್ ಕೆ.ಟಿ.** ವಯಸ್ಸು 15 ವರ್ಷ, ಇವನು ವಿನೋಬ ನಗರದ 1ನೇ ಮೇನ್, 14ನೇ ಕ್ರಾಸ್‌ನ ತಮ್ಮ ಮನೆಯಿಂದ ಶಾಲೆಗೆ ಹೋಗುತ್ತೇನೆ. ಎಂದು ಶಾಲೆಗ ಹೋದವನು ಪುನಃ ಶಾಲೆಯಿಂದ ಮನೆಗೆ ವಾಪಾಸ್ ಬಂದಿರುವುದಿಲ್ಲ. ಇವನು **ಸಿದ್ಧಿವಿನಾಯಕ ಶಾಲೆಯಲ್ಲಿ S.S.L.C** ಓದುತ್ತಿದ್ದಾನೆ. ಈ ಹುಡುಗನನ್ನು ಯಾರಾದರೂ ನೋಡಿದ್ದಲ್ಲಿ ಹತ್ತಿರದ ಬಡಾವಣೆ ಪೊಲೀಸ್ ಠಾಣೆಗಾಗಲೀ ಅಥವಾ ಈ ಕೆಳಗಿನ ಮೊಬೈಲ್ ನಂಬರ್‌ಗಳಿಗಾಗಲೀ ತಿಳಿಸಬೇಕಾಗಿ ವಿನಂತಿ.

**ಮೊ : 99729 22718, 93535 96619, 97415 49892**

## ಆರ್. ನಾಸೀರ್ ಅವರಿಗೆ ಪಿಹೆಚ್‌ಡಿ



ದಾವಣಗೆರೆ, ಜು.15- ನಗರದ ಕಾನೂನು ಮಾಪಕ ಇಲಾಖೆ ಗುತ್ತಿಗೆದಾರ ಹಾಗೂ ಚಲನಚಿತ್ರ ಹಂಚಿಕೆದಾರ ಯರಗಲ್ ರಾಜಸಾಬ್ ಅವರ ಪುತ್ರ ಆರ್. ನಾಸೀರ್ ಅವರಿಗೆ ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಿಂದ ಪಿಹೆಚ್‌ಡಿ ಪದವಿ ಲಭಿಸಿದೆ.

ಯುಬಿಡಿಟಿ ಕಾಲೇಜಿನ ಪ್ರಾಧ್ಯಾಪಕ ಡಾ. ಮೊಹಮ್ಮದ್ ರಫಿ ಅವರ ಮಾರ್ಗದರ್ಶನದಲ್ಲಿ 'ಫ್ಯೂಜನ್ ಆಫ್ ವಿಡಿಯೋ ಬೇಸ್ಡ್ ಜಿಎಐಟಿ ಅಂಡ್ ಕಮ್ಯೂಲೇಟಿವ್ ಫೂಟ್ ಪ್ರಜರ್ ಇಮೇಜಸ್ ಫಾರ್ ಹ್ಯೂಮನ್ ಐಡೆಂಟಿಫಿಕೇಷನ್ ಇನ್ ವಿಡಿಯೋ ಸರ್ವೇಲೆನ್ಸ್ ಸಿಸ್ಟಮ್' ವಿಷಯದಲ್ಲಿ ಫ್ಯಾಕ್ಯಲ್ಟಿ ಆಫ್ ಕಂಪ್ಯೂಟರ್ ಅಂಡ್ ಇನ್ಫಾರ್‌ಮೇಷನ್ ಸೈನ್ಸ್ ವಿಭಾಗದಿಂದ ಮಂಡಿಸಿದ ಸಂಶೋಧನಾ ಪ್ರಬಂಧಕ್ಕೆ ನಾಸೀರ್ ಅವರಿಗೆ ಈ ಪದವಿ ನೀಡಲಾಗಿದೆ.

## ಪ್ರತಿಭಾ ಪುರಸ್ಕಾರಕ್ಕಾಗಿ ಮುಸ್ಲಿಂ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

ದಾವಣಗೆರೆ, ಜು.15- ದುಮ್ಮಿ ಬಡೆಹುಸೇನ್ ಸಾಬ್ ಚಾರಿಟೇಬಲ್ ಮತ್ತು ಶೈಕ್ಷಣಿಕ ಟ್ರಸ್ಟ್ ವತಿಯಿಂದ ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ದಾವಣಗೆರೆ ತಾಲ್ಲೂಕಿನ ಮುಸ್ಲಿಂ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ವಿದ್ಯಾರ್ಥಿಗಳು ಅರ್ಜಿಯನ್ನು ವಿದ್ಯಾನಗರ ಮುಖ್ಯ ರಸ್ತೆಯಲ್ಲಿರುವ ಗೇಮ್ಸ್ ಗ್ಯಾಲಕ್ಸಿಯಲ್ಲಿ ನಾಳೆಯೊಳಗೆ ಸಲ್ಲಿಸಬಹುದು ಎಂದು ಟ್ರಸ್ಟ್ ಅಧ್ಯಕ್ಷ ಡಾ.ಡಿ. ಅಬ್ದುಲ್ ಬುಡನ್ (9448729083) ತಿಳಿಸಿದ್ದಾರೆ.

# ಜಜಮು ವೈದ್ಯಕೀಯ ವಿದ್ಯಾರ್ಥಿಗಳಿಂದ ದೇಸಿ ಕ್ರೀಡೆಗಳ ಸಂಭ್ರಮ







ದಾವಣಗೆರೆ, ಜು. 15 - ನಗರದ ಜಜಮು ವೈದ್ಯಕೀಯ ಮಹಾವಿದ್ಯಾಲಯದ ವಿದ್ಯಾರ್ಥಿಗಳ ಸಂಘದಿಂದ 76ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಸ್ಥಳೀಯ ಗಾಜಿನ ಮನೆ ಎದುರುಗಡೆ ವೀರಬಸಪ್ಪನವರ ಗದ್ದೆಯಲ್ಲಿ ಇಂದಿನಿಂದ ಇದೇ ದಿನಾಂಕ 30ರವರೆಗೆ ವಿವಿಧ ದೇಸಿ ಕ್ರೀಡೆಗಳ ಉತ್ಸವ ಆಯೋಜಿಸಿದೆ.

ಈ ಉತ್ಸವಕ್ಕೆ ಮಳೆಗಾಲದ ಉತ್ಸವ ಅಥವಾ ಮಾನ್ಸೂನ್ ಫಿಯೆಸ್ಟಾ ಎಂಬ ಹೆಸರಿನಡಿ ಕ್ರೀಡೆಗಳನ್ನು ಇಂದು ನಡೆಸಲಾಯಿತು. ದೇಸಿ ಸೊಬಗು ಪರಿಚಯಿಸಬೇಕು ಎಂಬ ಸದುದ್ದೇಶದಿಂದ ಈ ಕ್ರೀಡೆಗಳನ್ನು ಹಮ್ಮಿಕೊಳ್ಳಲಾಗಿದೆ.

ಎಷ್ಟೋ ಮಂದಿಗೆ ಗ್ರಾಮೀಣ ಪ್ರದೇಶದ ಸೊಬಗು, ಸೊಗಡು ಪರಿಚಯ ಕಡಿಮೆ. ಇಲ್ಲಿನ ಮಳೆಗಾಲದ ಆಟಗಳನ್ನು ಅವರಿಗೆ ತಿಳಿಸಿಕೊಡಬೇಕೆಂಬ ಕಾರಣಕ್ಕೆ ಈ ಸ್ಪರ್ಧೆಗಳನ್ನು ನಡೆಸಲಾಯಿತು.

ಕೆಸರು ಗದ್ದೆ ಓಟ, ಕೆಸರು ಗದ್ದೆ ವಾಲಿಬಾಲ್, ಕೆಸರುಗದ್ದೆ ಥ್ರೋ ಬಾಲ್, ಹಗ್ಗ ಜಗ್ಗಾಟ ಆಯೋಜಿಸಲಾಗಿತ್ತು. ವಿದ್ಯಾರ್ಥಿ, ವಿದ್ಯಾರ್ಥಿನಿಯರು ಖುಷಿ ಖುಷಿಯಿಂದಲೇ ಪಾಲ್ಗೊಂಡಿದ್ದರು. ಕೆಸರಿನಲ್ಲಿ ಕುಣಿದು ಕುಪ್ಪಳಿಸಿದರು.

ಬಳಿಕ ಮಾತನಾಡಿದ ವಿದ್ಯಾರ್ಥಿನಿಯರು, ನಾವು ಜೀವನದಲ್ಲಿ ಕೆಸರು ಗದ್ದೆಯಲ್ಲಿ ಕಾಲಿಟ್ಟಿದ್ದೇ ಕಡಿಮೆ. ಅಂಥಹುದರಲ್ಲಿ ಇಂಥ ಆಟಗಳನ್ನು ನೋಡಿದ್ದು ಕಡಿಮೆ. ಇಂದು ನಾವೇ ಕೆಸರಿನಲ್ಲಿ ಇಳಿದು ಸಂತೋಷ ಪಟ್ಟೆವು. ಇದು ತುಂಬಾನೇ ಖುಷಿ ಕೊಟ್ಟಿತು ಎಂದು ಸಂತಸ ಹಂಚಿಕೊಂಡರು.

ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ಬಿ.ಮುರುಗೇಶ್ ಅವರ ನೇತೃತ್ವದಲ್ಲಿ ದೇಸೀ ಕ್ರೀಡೆಗಳ ಉತ್ಸವ ನಡೆಯಿತು. ಮಹಾನಗರ ಪಾಲಿಕೆಯ ಮೇಯರ್ ವಿನಾಯಕ ಪೈಲ್ವಾನ್ ಪಂದ್ಯಾವಳಿಗೆ ಚಾಲನೆ ನೀಡಿ ಶುಭ ಹಾರೈಸಿದರು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದ ಪಾಲಿಕೆ ವಿರೋಧ ಪಕ್ಷದ ಮಾಜಿ ನಾಯಕ ಹಾಗೂ ಹಾಲಿ ಸದಸ್ಯ ಗಡಿಗುಡಾಳ್ ಮಂಜುನಾಥ್, ಕಾಲೇಜಿನ ವಿದ್ಯಾರ್ಥಿಗಳಿಗೆ ನಡೆಸುತ್ತಿರುವ ಮಳೆಗಾಲದ ಉತ್ಸವ ದಲ್ಲಿ ವಿದ್ಯಾರ್ಥಿಗಳು ಖುಷಿ ಖುಷಿಯಿಂದ ಪಾಲ್ಗೊಂಡಿರುವುದು ಸಂತಸದ ಸಂಗತಿ ಎಂದು ತಿಳಿಸಿದರು.

ಕಾಲೇಜಿನ ಪ್ರಾಂಶುಪಾಲ ಡಾ. ಎಸ್. ಬಿ. ಮುರುಗೇಶ್ ಮಾತನಾಡಿ, ವಿದ್ಯಾರ್ಥಿಗಳು ಯಾವಾಗಲೂ ಓದು, ಪಠ್ಯ ಚಟುವಟಿಕೆಗಳಲ್ಲಿ ತೊಡಗಿರುತ್ತಾರೆ. ಮಾನಸಿಕ, ದೈಹಿಕ ಹಾಗೂ ಮನಸ್ಸು ಪ್ರಫುಲ್ಲವಾಗಲು ಇಂಥ ಕ್ರೀಡೆಗಳು ಸಹಕಾರಿ ಎಂದರು. ಮುಂಬರುವ ದಿನಗಳಲ್ಲಿ ಇಂಥ ಕಾರ್ಯಕ್ರಮಗಳನ್ನು ಹೆಚ್ಚಾಗಿ ನಡೆಸಲಾಗುವುದು. ದೇಶಿಯ ಸೊಬಗು ಎಲ್ಲರಿಗೂ ಗೊತ್ತಾಗಬೇಕು ಎಂಬ ಸದುದ್ದೇಶ ನಮ್ಮದು ಎಂದು ಹೇಳಿದರು.

ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ ಗೋಪಾಲಕೃಷ್ಣ ಸೇರಿದಂತೆ ಅಧ್ಯಾಪಕರು,ಸಿಬ್ಬಂದಿ ವರ್ಗದವರು ಪಾಲ್ಗೊಂಡಿದ್ದರು.

ಸುಮಾರು 500 ಕ್ಕೂ ಹೆಚ್ಚು ವಿದ್ಯಾರ್ಥಿ, ವಿದ್ಯಾರ್ಥಿನಿಯರು ಕೆಸರು ಕ್ರೀಡೆಗಳಲ್ಲಿ ಭಾಗವಹಿಸಿ ಸಂಭ್ರಮಿಸಿದರು. ವೀಕೆಂಡ್‌ನ ಶನಿವಾರ ಕಾಲೇಜು ವಿದ್ಯಾರ್ಥಿಗಳಿಗೆ ಹಬ್ಬದ ವಾತಾವರಣದಂತೆ ಭಾಸವಾಗುತಿತ್ತು.

# ಓದುವ ಅಭ್ಯಾಸ, ಹವ್ಯಾಸ ಜ್ಞಾನಾರ್ಜನೆ ವೃದ್ಧಿಗೆ ಸಹಕಾರಿ

### 'ಕಸಾಪ ಸಮ್ಮೇಳನ ಅಧ್ಯಕ್ಷರ ಭಾಷಣಗಳು' ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಕಸಾಪ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ



ದಾವಣಗೆರೆ, ಜು. 15- ಹೆಚ್ಚು ಹೆಚ್ಚು ಪುಸ್ತಕಗಳನ್ನು ಓದುವ ಅಭ್ಯಾಸ ಮತ್ತು ಹವ್ಯಾಸ ಇಟ್ಟುಕೊಳ್ಳುವವರಲ್ಲಿ ಜ್ಞಾನಾರ್ಜನೆ ವೃದ್ಧಿಯಾಗುತ್ತದೆ. 'ಪುಸ್ತಕಗಳು ಜ್ಞಾನ ಭಂಡಾರದ ಕೀಲಿ ಕೈ' ಇದ್ದಂತೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ. ವಾಮದೇವಪ್ಪ ಅಭಿಪ್ರಾಯಿಸಿದರು.

ನಗರದ ಶ್ರೀಮತಿ ಪುಷ್ಪ ಶಾಮನೂರು ಮಹಾಲಿಂಗಪ್ಪ ವಿಜ್ಞಾನ ಪದವಿ ಪೂರ್ವ ಕಾಲೇಜು ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ 'ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಅಧ್ಯಕ್ಷರ ಭಾಷಣಗಳು' ಪುಸ್ತಕವನ್ನು ಬಿಡುಗಡೆ ಮಾಡಿ ಮಾತನಾಡುತ್ತಿದ್ದರು.

ಭಾರತ ಇಂದು ಜ್ಞಾನ ಸಂಪಾದನೆಯಲ್ಲಿ ವಿಶ್ವ ಗುರುವಿನ ಸ್ಥಾನದಲ್ಲಿದೆ. ಸ್ಪರ್ಧಾತ್ಮಕ ಜಗತ್ತಿನಲ್ಲಿ ಜ್ಞಾನಕ್ಕೆ ಹೆಚ್ಚು ಮಹತ್ವವಿದೆ. ಅದಕ್ಕೆ ಉತ್ತಮ ಉದಾಹರಣೆ ಎಂದರೆ ನಿನ್ನೆ ತಾನೆ ಚಂದ್ರಯಾನ-3 ಉಡಾವಣೆಗೊಂಡ ಬಾಹ್ಯಾಕಾಶ ನೌಕೆಯ ಯಶಸ್ಸು ಇಡೀ ವಿಶ್ವವನ್ನೇ ನಿಬ್ಬೆರಗಾಗಿಸಿದೆ ಎಂದು ತಿಳಿಸಿದರು.

ಯಶಸ್ಸಿನ ಹಿಂದೆ ಕನ್ನಡದ ವಿಜ್ಞಾನಿಗಳ ಪಾತ್ರವು ಇದೆ ಎಂದು ಹೆಮ್ಮೆಯಿಂದ ಹೇಳಿ ಇದಕ್ಕಾಗಿ ಶ್ರಮಿಸಿದ ಇಸ್ರೋ ವಿಜ್ಞಾನಿಗಳ ತಂಡವನ್ನು ಅಭಿನಂದಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಹರಿಹರದ ಹಿರಿಯ ಕವಿ ಹುಲಿಕಟ್ಟೆ ಚನ್ನಬಸಪ್ಪ ಮಾತನಾಡಿ, ವಿದ್ಯಾರ್ಥಿಗಳು ಕನ್ನಡ ನಾಡು ನುಡಿಯ ಬಗ್ಗೆ ಅಭಿಮಾನ ಬೆಳೆಸಿಕೊಳ್ಳಬೇಕು. ಕನ್ನಡದ ಇತಿಹಾಸವನ್ನು ತಿಳಿದುಕೊಂಡು ಹೊಸ ಇತಿಹಾಸ ನಿರ್ಮಾಣಕ್ಕೆ ಕಾರಣೀಭೂತರಾಗಬೇಕು ಎಂದು ಕರೆ ನೀಡಿದರು

ಕೃತಿಯ ಪ್ರಕಾಶಕ ಹಾಗೂ ಲೇಖಕರೂ ಆದ ಸಿರಿಗೆರೆ ಯರ್‍ರಿಸ್ವಾಮಿ ಪ್ರಾಸ್ತಾವಿಕವಾಗಿ ಮಾತನಾಡಿ, 30 ಜಿಲ್ಲೆಗಳಲ್ಲಿ ನಡೆದ ಜಿಲ್ಲಾ ಸಮ್ಮೇಳನಗಳ ಅಧ್ಯಕ್ಷರುಗಳ ಭಾಷಣವನ್ನು ಕೃತಿ ರೂಪದಲ್ಲಿ ಹೊರ ತರುವ ಉದ್ದೇಶ ನನ್ನದಾಗಿತ್ತು, ಈ ಕೃತಿ ಬಿಡುಗಡೆಗೆ ಸಹಾಯ ಮಾಡಿದ ವಿದ್ಯಾಸಂಸ್ಥೆ ಮುಖ್ಯಸ್ಥ ಶಾಮನೂರು ಮಹಾಲಿಂಗಪ್ಪ ಅವರನ್ನು ಅಭಿನಂದಿಸುವುದಾಗಿ ಹೇಳಿದರು.

ವೇದಿಕೆ ಮೇಲೆ ಕಾಲೇಜಿನ ಮುಖ್ಯಸ್ಥರಾದ ಸಂಜನಾ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ ಬಿ. ದಿಳ್ಯಪ್ಪ, ಸಾಹಿತಿ ಬಾ.ಮ. ಬಸವರಾಜಯ್ಯ, ನಿವೃತ್ತ ಕಂದಾಯ ಅಧಿಕಾರಿ ಗುರುಮೂರ್ತಿ ಮುಂತಾದವರು ಉಪಸ್ಥಿತರಿದ್ದರು.

ಪ್ರಾಚಾರ್ಯ ಎಂ.ಎಸ್. ಮಲ್ಲಿಕಾರ್ಜುನಯ್ಯ ಸ್ವಾಗತಿಸಿದರು ಕನ್ನಡ ಅಧ್ಯಾಪಕರಾದ ಶ್ರೀಮತಿ ಸರ್ವ ಮಂಗಳಮ್ಮ ವಂದಿಸಿದರು. ಇದೇ ಸಂದರ್ಭದಲ್ಲಿ ಕೃತಿಯ ಲೇಖಕ ಸಿರಿಗೆರೆ ಯರ್‍ರಿಸ್ವಾಮಿ ಸ್ವಾಮಿ ಅವರನ್ನು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಸನ್ಮಾನಿಸಲಾಯಿತು.

# ಎಸ್ಸೆಸ್ಸೆಂರಿಂದ ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿ : ವಚನಾನಂದ ಶ್ರೀಗಳು



ಹರಿಹರ, ಜು. 15 - ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಅವರು ತಮ್ಮ ಧರ್ಮಪತ್ನಿ ಶ್ರೀಮತಿ ಪ್ರಭಾ ಅವರ ಜೊತೆಗೂಡಿ ಶನಿವಾರ ಪಂಚಮಸಾಲಿ ಜಗದ್ಗುರು ಪೀಠಕ್ಕೆ ಭೇಟಿ ನೀಡಿ, ಶ್ರೀ ವಚನಾನಂದ ಸ್ವಾಮೀಜಿ ಆಶೀರ್ವಾದ ಪಡೆದುಕೊಂಡರು.

ಈ ವೇಳೆ ದಾವಣಗೆರೆ ಜಿಲ್ಲೆಯ ಸಮಗ್ರ ಅಭಿವೃದ್ಧಿ ಕುರಿತು ಮಾತನಾಡಿದ ಮಲ್ಲಿಕಾರ್ಜುನ್ ಅವರು, ಪೀಠದ ಸಹಕಾರ ಕೋರಿದರು. ತುಂಗಾರತಿಯ ಪ್ರಗತಿ ಕುರಿತು ವಿವರಗಳನ್ನು ಪಡೆದುಕೊಂಡು, ಅದಕ್ಕೆ ಅಗತ್ಯ ಬೆಂಬಲ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ಮಲ್ಲಿಕಾರ್ಜುನ್ ಅವರನ್ನು ಅಭಿನಂದಿಸಿ ಮಾತನಾಡಿದ ಶ್ರೀ ವಚನಾನಂದ ಸ್ವಾಮೀಜಿ, ಈ ಹಿಂದೆ ರಾಜ್ಯ ಯುವಜನ ಮತ್ತು ಕ್ರೀಡಾ ಸಚಿವರಾಗಿದ್ದಾಗ ದಾವಣಗೆರೆಯನ್ನು ಅಭಿವೃದ್ಧಿಪಡಿಸಿದ ಬಗ್ಗೆ ಮತ್ತು ಅವರನ್ನು 'ಮಾಡೆಲ್ ಮಲ್ಲಿಕಾರ್ಜುನ್' ಎಂದು ಜನ ಪ್ರೀತಿಯಿಂದ ಕರೆಯುತ್ತಿದ್ದುದನ್ನು ಸ್ಮರಿಸಿ, ಇವರ ಅಧಿಕಾರವಧಿಯಲ್ಲಿ ದಾವಣಗೆರೆ ಜಿಲ್ಲೆ ಸರ್ವತೋಮುಖ ಅಭಿವೃದ್ಧಿ ಹೊಂದುವುದರಲ್ಲಿ ಸಂಶಯವಿಲ್ಲ ಎಂದರು.

ಈ ಸಂದರ್ಭದಲ್ಲಿ ಪೀಠದ ಪ್ರಧಾನ ಧರ್ಮದರ್ಶಿ ಬಿ.ಸಿ.ಉಮಾಪತಿ, ವಕೀಲ ಪ್ರಕಾಶ್ ಪಾಟೀಲ್, ಚಂದ್ರಶೇಖರ್ ಪೂಜಾರ್, ಗುತ್ತೂರು ಹಾಲೇಶ್ ಗೌಡ ಸೇರಿದಂತೆ ಸಮಾಜದ ದಾವಣಗೆರೆ ಜಿಲ್ಲಾ ಘಟಕ, ಮಹಿಳಾ ಘಟಕ ಹಾಗೂ ಸದ್ಭಕ್ತರು ಹಾಜರಿದ್ದರು.

## ಪತ್ರಿಕಾ ದಿನಾಚರಣೆಗೆ ಎಸ್ಸೆಸ್ ಚಾಲನೆ



ದಾವಣಗೆರೆ, ಜು. 15- ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ ಸಂಘಟನೆಯ ಜಿಲ್ಲಾ ಮತ್ತು ತಾಲ್ಲೂಕು ಘಟಕದ ವತಿಯಿಂದ ನಗರದ ಗುರುಭವನದಲ್ಲಿ ಪತ್ರಿಕಾ ದಿನಾಚರಣೆ, ಪದಗ್ರಹಣ ಹಾಗೂ ಪತ್ರಕರ್ತರಿಗೆ ಸನ್ಮಾನ ಕಾರ್ಯಕ್ರಮವು ಇಂದು ನಡೆಯಿತು.

ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಶಾಸಕ ಶಾಮನೂರು ಶಿವಶಂಕರಪ್ಪ ಅವರು, ಪತ್ರಕರ್ತರ ಸಂಘಟನೆ ಸಮಾಜಕ್ಕೆ ಒಳಿತು ಮಾಡುವ ನಿಟ್ಟಿನಲ್ಲಿ ರಾಜ್ಯಮಟ್ಟದಲ್ಲಿ ಬೆಳೆಯುವಂತಾಗಲಿ ಎಂದು ಆಶಿಸಿದರು.

ಪತ್ರಿಕಾ ವೃತ್ತಿ ವಿಶೇಷವಾದುದು. ಅಂತಹ ವೃತ್ತಿಯಲ್ಲಿ ಭಾಗಿಯಾಗಿರುವ ಪತ್ರಕರ್ತರಿಗೆ ಅಗತ್ಯವಿರುವ ಸಹಕಾರ ನೀಡುವುದಾಗಿ ಶಾಸಕರು ಹೇಳಿದರು.

ಸಂಘಟನೆ ರಾಜ್ಯ ಉಪಾಧ್ಯಕ್ಷ ಬಿ. ವಾಸುದೇವ್ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ರಾಜ್ಯಾಧ್ಯಕ್ಷ ಬಂಗ್ಲೆ ಮಲ್ಲಿಕಾರ್ಜುನ್, ಶಾಸಕ ಕೆ. ಎಸ್. ಬಸವಂತಪ್ಪ ಮಾತನಾಡಿದರು.

ಕನ್ನಡ ಪರ ಹೋರಾಟಗಾರ ಟಾರ್ಗೆಟ್ ಅಸ್ಲಂ, ತಂಜೀಮುಲ್ ಮುಸ್ಲಿಂಮೀನ್ ಫಂಡ್ ಅಸೋಸಿಯೇಷನ್ ಅಧ್ಯಕ್ಷ ದಾದುಶೇಟ್, ಪಾಲಿಕೆ ಸದಸ್ಯರಾದ ಕೆ. ಚಮನ್‌ಸಾಬ್, ಎ. ನಾಗರಾಜ್, ಜಿಲ್ಲಾಧ್ಯಕ್ಷ ಜಿ.ಹೆಚ್. ನಾಗರಾಜ್ ಆವರಗೆರೆ, ಗೌರವ ಸಲಹೆಗಾರ ಅಬ್ದುಲ್ ಮಜೀದ್, ಬಿ. ಅಲ್ಲಾಭಕ್ಷಿ, ಎ.ಎಂ. ಕೊಟ್ರಯ್ಯ, ಸಂತೋಷ್ ದೊಡ್ಡಮನಿ ಮತ್ತಿತರರು ಇದ್ದರು.

ಇದೇ ವೇಳೆ ಹಿರಿಯ ಪತ್ರಕರ್ತ ನಾಗರಾಜ್ ಬಡದಾಳ್, ಕೆ. ಜೈಮುನಿ, ಎಂ. ನಾಗರಾಜ್ ಅವರನ್ನು ಸನ್ಮಾನಿಸಲಾಯಿತು.

# ಜಗಳೂರು : ಕೆರೆ ತುಂಬಿಸುವ ಯೋಜನೆ ವಿಳಂಬ



ಜು. 19ರಂದು ಸಿರಿಗೆರೆ ಶ್ರೀಗಳ ನೇತೃತ್ವದಲ್ಲಿ ಸಭೆ: ಶಾಸಕ ಬಿ.ದೇವೇಂದ್ರಪ್ಪ

ಜಗಳೂರು, ಜು. 15 - ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ 57 ಕೆರೆ ತುಂಬಿಸುವ ಯೋಜನೆ ವಿಳಂಬವಾಗಿರುವ ಬಗ್ಗೆ ಕಾಮಗಾರಿಯನ್ನು ಚುರುಕುಗೊಳಿಸಲು ಹಾಗೂ ಪರಿಶೀಲನೆ ನಡೆಸಲು ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿಗಳ ನೇತೃತ್ವದಲ್ಲಿ ಸಭೆ ಕರೆಯಲಾಗಿದೆ ಎಂದು ಶಾಸಕ ಬಿ. ದೇವೇಂದ್ರಪ್ಪ ತಿಳಿಸಿದ್ದಾರೆ.

ಇಂದು ಶಾಸಕರ ಜನಸಂಪರ್ಕ ಕಚೇರಿ ಯಲ್ಲಿ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಶಾಸಕರು, ಜು. 19ರ ಬುಧವಾರ ಇಲ್ಲಿನ ತರಳಬಾಳು ಕೇಂದ್ರದ ಕಲ್ಯಾಣ ಮಂಟಪ ದಲ್ಲಿ ಸಭೆ ನಡೆಯಲಿದ್ದು, ನೀರಾವರಿ ನಿಗಮದ ಅಧಿಕಾರಿಗಳು ಇಂಜಿನಿಯರ್‌ಗಳು ಭಾಗವಹಿಸಿ ಮಾಹಿತಿ ನೀಡಲಿದ್ದಾರೆ ಎಂದು ಅವರು ತಿಳಿಸಿದರು.

ಯೋಜನೆಯು 2013 ರಲ್ಲಿ ಆರಂಭವಾಗಿದ್ದರೂ ಸಹ ಈವರೆಗೂ ಪೂರ್ಣಗೊಂಡಿರುವುದಿಲ್ಲ. ಈ ಬಗ್ಗೆ ವಿಧಾನಸಭಾ ಅಧಿವೇಶನದಲ್ಲಿ ಮಾತನಾಡಿ ಸರ್ಕಾರದ ಗಮನಕ್ಕೆ ಸೆಳೆದಿರುತ್ತೇನೆ. ಬರಪೀಡಿತ ತಾಲ್ಲೂಕಿನ ರೈತರಿಗೆ ಮಹತ್ವದ ಯೋಜನೆಯಾಗಿರುವ ಕೆರೆ ತುಂಬಿಸುವ ಯೋಜನೆ ಆದಷ್ಟು ಶೀಘ್ರ ಪೂರ್ಣಗೊಳ್ಳುವುದು ಕ್ಷೇತ್ರದ ಅಭಿವೃದ್ಧಿಗೆ ಸಹಕಾರಿಯಾಗಲಿದೆ.

ಕಾಮಗಾರಿ ವಿಳಂಬವಾಗಲು ಅಧಿಕಾರಿಗಳು ಹಾಗೂ ಇಂಜಿನಿಯರ್‌ಗಳು ಮುಖ್ಯ ಕಾರಣವಾಗಿರುತ್ತಾರೆ. ಆದರೆ ನಾನು ಸುಮ್ಮನಿರುವುದಿಲ್ಲ. ಮೊದಲ ಹಂತದಲ್ಲಿ 11 ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಇದೆ. ಹಂತ ಹಂತವಾಗಿ ಎಲ್ಲ ಕೆರೆಗಳಿಗೂ ನೀರು ತುಂಬಿಸಲಾಗುವುದು.

ಸಭೆಗೆ ಪಕ್ಷಾತೀತವಾಗಿ ಸಂಸದರು ಮತ್ತು ಮಾಜಿ ಶಾಸಕರುಗಳನ್ನೂ ಸಹ ಆಹ್ವಾನಿಸಲಾಗಿದೆ. ಕ್ಷೇತ್ರದ ಅಭಿವೃದ್ಧಿಗೆ ಕೆರೆ ತುಂಬಿಸುವ ಯೋಜನೆ ಅತ್ಯಂತ ಮಹತ್ವದ್ದಾಗಿರುತ್ತದೆ ಎಂದರು.

ಈ ಸಂದರ್ಭದಲ್ಲಿ ಕೆಪಿಸಿಸಿ ಎಸ್ಟಿ ಘಟಕದ ರಾಜ್ಯಾಧ್ಯಕ್ಷ ಕೆ.ಪಿ. ಪಾಲಯ್ಯ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಂಶೀರ್ ಅಹ್ಮದ್, ಪಕ್ಷದ ಮುಖಂಡರಾದ ಕಲ್ಲೇಶ್ ಪಟೇಲ್, ಪಲ್ಲಾಗಟ್ಟೆ ಶೇಖರಪ್ಪ, ಪ್ರಕಾಶ್ ರೆಡ್ಡಿ ಮುಂತಾದವರು ಇದ್ದರು.

## ನಗರದಲ್ಲಿ ನಾಳೆ ಉದ್ಯಮಶೀಲತಾ ಪ್ರೇರಣಾ ತರಬೇತಿ

ದಾವಣಗೆರೆ, ಜು.15- ನಾಡಿದ್ದು 17 ರ ಸೋಮವಾರ ಬೆಳಿಗ್ಗೆ 11.30ಕ್ಕೆ ಕಿತ್ತೂರು ರಾಣಿ ಚೆನ್ನಮ್ಮ ಮತ್ತು ಸಂಗೊಳ್ಳಿ ರಾಯಣ್ಣ ಸಂಘದ ಸೆಮಿನಾರ್ ಹಾಲ್‌ನಲ್ಲಿ 3 ದಿನಗಳ ಉದ್ಯಮಶೀಲತಾ ಪ್ರೇರಣಾ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಕೌಶಲ್ಯಾಭಿವೃದ್ದಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಕರ್ನಾಟಕ ಉದ್ಯಮಶೀಲತಾಭಿವೃದ್ದಿ ಕೇಂದ್ರ (ಸಿಡಾಕ್), ಜಿಲ್ಲಾ ಕೌಶಲ್ಯ ಮಿಷನ್ ಹಾಗೂ ಕಿತ್ತೂರು ರಾಣಿ ಚೆನ್ನಮ್ಮ ಮತ್ತು ಸಂಗೊಳ್ಳಿ ರಾಯಣ್ಣ ಮಹಿಳಾ ಸಂಘ (ದಾವಣಗೆರೆ) ಇವರ ಸಹಯೋಗದಲ್ಲಿ ಕಾರ್ಯಕ್ರಮವನ್ನು ಜಿಲ್ಲಾ ಕೌಶಲ್ಯಾಭಿವೃದ್ದಿ ಅಧಿಕಾರಿ ಬಸನಗೌಡ ಉದ್ಘಾಟಿಸುವರು. ಸಿಡಾಕ್ ನಿರ್ದೇಶಕ ಆರ್.ಪಿ.ಪಾಟೀಲ್ ಅಧ್ಯಕ್ಷತೆ ವಹಿಸುವರು. ಜನ ಶಿಕ್ಷಣ ಸಂಸ್ಥಾನದ ನಿವೃತ್ತ ನಿರ್ದೇಶಕ ಬಿ ಮುಕುಂದಪ್ಪ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸುವರು. ಕಿತ್ತೂರು ರಾಣಿ ಚೆನ್ನಮ್ಮ ಹಾಗೂ ಸಂಗೊಳ್ಳಿ ರಾಯಣ್ಣ ಮಹಿಳಾ ಸಂಘದ ಮುಖ್ಯಸ್ಥರಾದ ಶಿಲ್ಪಾ ಉಪಸ್ಥಿತರಿರುವವರು.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಮಹಾನಗರ ಪಾಲಿಕೆ ಹಳೆ ಬಸ್ ನಿಲ್ದಾಣ, ಅರುಣ ಸರ್ಕಲ್ ಕಾರ್ಪೊರೇಷನ್ ಆಫೀಸ್, ರೇಣುಕಾ ಮಂದಿರ, ಬಡಾವಣೆ ಪೊಲೀಸ್ ಸ್ಟೇಷನ್, ರತ್ನಮ್ಮ ಹಾಸ್ಟಲ್, ಹೈಸ್ಕೂಲ್ ಮೈದಾನ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ನಾಳೆ ಕೆಎಎಸ್ ಉಚಿತ ತರಬೇತಿ

ದಾವಣಗೆರೆ, ಜು.15- ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ ಹಾಗೂ ಜಿಎಂ ತಾಂತ್ರಿಕ ಮಹಾವಿದ್ಯಾಲಯ ಇವರ ಸಂಯುಕ್ತಾಶ್ರಯದಲ್ಲಿ ಕರ್ನಾಟಕ ಲೋಕಸೇವಾ ಆಯೋಗ ನಡೆಸುವ ಕೆ.ಎ.ಎಸ್. ಹುದ್ದೆಗಳ ಸ್ಪರ್ಧಾತ್ಮಕ ಪರೀಕ್ಷೆ ಬರೆಯಲಿರುವ ಅಭ್ಯರ್ಥಿಗಳಿಗೆ ನಾಡಿದ್ದು ದಿನಾಂಕ 17 ರಿಂದ 26 ರವರೆಗೆ ಉಚಿತ ಪರೀಕ್ಷಾ ಪೂರ್ವ ತರಬೇತಿ ನಡೆಯಲಿದೆ ಎಂದು ಉದ್ಯೋಗಾಧಿಕಾರಿ ಡಿ.ರವೀಂದ್ರ ತಿಳಿಸಿದ್ದಾರೆ.

ರೂಂ. ನಂ. 104, 3ನೇ ಮಹಡಿ, ಇಂಜಿನಿಯರಿಂಗ್ ಬ್ಲಾಕ್, ಜಿಎಂ ತಾಂತ್ರಿಕ ಮಹಾವಿದ್ಯಾಲಯದಲ್ಲಿ ನಡೆಯುವ ತರಬೇತಿಗೆ ಹಾಜರಾಗಲಿಚ್ಛಿಸುವ ಅಭ್ಯರ್ಥಿಗಳು ಇದೇ ದಿನಾಂಕ 17ರ ಬೆಳಿಗ್ಗೆ 10 ಗಂಟೆಗೆ ತರಬೇತಿಗೆ ಹಾಜರಾಗಬೇಕು. ವಿವರಕ್ಕೆ ಸಂಪರ್ಕಿಸಿ : 7406323294 ಅಥವಾ 861816 6204.

## ಕೋಳಿ ಸಾಕಾಣಿಕೆ ತರಬೇತಿ ಶಿಬಿರ

ದಾವಣಗೆರೆ, ಜು.15- ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ವತಿಯಿಂದ ನಗರದ ಪಶು ಆಸ್ಪತ್ರೆ ಆವರಣದ ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರದಲ್ಲಿ ನಾಡಿದ್ದು ದಿನಾಂಕ 17, 18 ರಂದು ಕೋಳಿ ಸಾಕಾಣಿಕೆ ತರಬೇತಿ ನಡೆಯಲಿದೆ. ವಿವರಕ್ಕೆ ಸಂಪರ್ಕಿಸಿ : 08192-233787.

**ಅರಸಿ ಕನ್ಸಲ್ಟೆನ್ಸಿ ಸರ್ವೀಸಸ್**

ನಮ್ಮಲ್ಲಿ ಕಟ್ಟಡ ಪರವಾನಿಗೆ (ದಾವಣಗೆರೆ ಮಹಾನಗರ ಪಾಲಿಕೆ ಮತ್ತು DHUDA), ಬಿಲ್ಡಿಂಗ್ ಪ್ಲಾನ್ (ವಾಸ್ತು ಪ್ರಕಾರ), ಎಸ್ಟಿಮೇಷನ್, ಕನ್‌ಸ್ಟ್ರಕ್ಷನ್ ಮತ್ತು ಮೆಟೀರಿಯಲ್ ಕಾಂಟ್ರ್ಯಾಕ್ಟ್ ಹಾಗೂ ಅಲಿನೇಷನ್, ಲೇಔಟ್ ಪ್ಲಾನ್ ಮತ್ತು ಅಭಿವೃದ್ಧಿ (Development) ಮಾಡಿಕೊಡಲಾಗುವುದು.

ಸಂಪರ್ಕಿಸಿ : ಪ್ರಿಯಾಂಕ ಜಿ.ಪಿ., ಇಂಜಿನಿಯರ್

+91 70190 70400

#1066, 2ನೇ ಮೇನ್, 1ನೇ ಕ್ರಾಸ್, ಓಂಕಾರ ಗಣಪತಿ ದೇವಸ್ಥಾನ ಎದುರು, ನಿಜಲಿಂಗಪ್ಪ ಲೇಔಟ್, ದಾವಣಗೆರೆ-577004.

# ಬಡವರ ಅಭ್ಯುದಯಕ್ಕೆ ಶ್ರಮಿಸುವ ಕಾಂಗ್ರೆಸ್: ಎಸ್ಸೆಸ್



### ಬಡ ಮಹಿಳೆಯರಿಗೆ ಹೊಲಿಗೆ ಯಂತ್ರ ವಿತರಿಸಿದ ಶಾಸಕರು


ದಾವಣಗೆರೆ, ಜು. 15- ಕಾಂಗ್ರೆಸ್ ಬಡವರ ಪಕ್ಷ ಎನ್ನುವುದಕ್ಕೆ ಇತ್ತೀಚೆಗೆ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ ಪಕ್ಷ ಬಡವರ ಕಲ್ಯಾಣಕ್ಕೆ ನೀಡಿರುವ ಕೊಡುಗೆಗಳೇ ಉದಾಹರಣೆ ಎಂದು ಶಾಸಕ ಶಾಮನೂರು ಶಿವಶಂಕರಪ್ಪ ತಿಳಿಸಿದರು.

ತಮ್ಮ ಗೃಹ ಕಛೇರಿಯಲ್ಲಿ ಮಹಾನಗರ ಪಾಲಿಕೆಯ ವಿವಿಧ ಯೋಜನೆಯಡಿ ಅರ್ಹ ಬಡ ಮಹಿಳೆಯರಿಗೆ ಹೊಲಿಗೆ ಯಂತ್ರ ಗಳನ್ನು ವಿತರಿಸಿ ಅವರು ಮಾತನಾಡಿದರು.

ಕಾಂಗ್ರೆಸ್ ಪಕ್ಷ ಸ್ವಾತಂತ್ರ್ಯ ಬಂದ ದಿನದಿಂದಲೂ ಬಡವರ ಕಲ್ಯಾಣಕ್ಕೆ ಅನೇಕ ಕಾರ್ಯಕ್ರಮಗಳನ್ನು ನೀಡುತ್ತಾ ಬಂದಿದ್ದು, ಇಂದಿಗೂ ಸಹ ಬಡವರ ಅಭ್ಯುದಯಕ್ಕೆ ಶ್ರಮಿಸುತ್ತಿದೆ ಎಂದರು.

ಜಿಲ್ಲಾ ಸಚಿವರ ಪತ್ನಿ ಶ್ರೀಮತಿ ಪ್ರಭಾ ಮಲ್ಲಿಕಾರ್ಜುನ್ ಅವರು ಮಾತನಾಡಿ, ಮಹಿಳೆಯರು ಸ್ವಾವಲಂಬಿ ಜೀವನ ನಡೆಸಲು ಈ ಯೋಜನೆ ಅತ್ಯಂತ ಅನುಕೂಲವಾಗಿದ್ದು, ಯಾರೂ ಸಹ ಈಗ ನೀಡಿರುವ ಹೊಲಿಗೆ ಯಂತ್ರಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕೆಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಪಾಲಿಕೆ ಮೇಯರ್ ವಿನಾಯಕ ಪೈಲ್ವಾನ್, ಸದಸ್ಯರುಗಳಾದ ಎ. ನಾಗರಾಜ್. ರಹೀಂ ಸಾಬ್, ಜಿ.ಎಸ್. ಮಂಜುನಾಥ್, ಜಾಕೀರ್ ಅಲಿ, ಉದಯಕುಮಾರ್, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಎಸ್.ಮಲ್ಲಿಕಾರ್ಜುನ್, ವಕೀಲರ ಅಧ್ಯಕ್ಷ ಪ್ರಕಾಶ್ ಪಾಟೀಲ್, ಹೆಚ್.ಜಯಣ್ಣ, ಮಹಿಳಾ ಕಾಂಗ್ರೆಸ್ ಜಿಲ್ಲಾಧ್ಯಕ್ಷರಾದ ಶ್ರೀಮತಿ ಅನಿತಾಬಾಯಿ ಮಾಲತೇಶ್ ಇತರರಿದ್ದರು.









**ಜನ್ಮ ದಿನದ ಶುಭಾಶಯಗಳು**

ರಿಯಲ್ ಎಸ್ಟೇಟ್ ಉದ್ಯಮಿಗಳೂ, ಜಮೀನ್ದಾರರೂ, ನಮ್ಮ ಆತ್ಮೀಯರೂ ಆದ

**ಶ್ರೀ ಭಾಸ್ಕರ್ ರಾವ್**

ಅವರಿಗೆ ಹುಟ್ಟುಹಬ್ಬದ ಶುಭಾಶಯಗಳು.
ಶ್ರೀಯುತರು ನೂರಾರು ಕಾಲ
ಸುಖ-ಸಂತೋಷದಿಂದ ಬಾಳಲಿ ಎಂದು ಹಾರೈಸುತ್ತೇವೆ.

✦ DTN ನಾರಾಯಣ ಸ್ವಾಮಿ, ಹೋಲ್‌ಸೇಲ್ ತರಕಾರಿ ವ್ಯಾಪಾರಸ್ಥರು ✦ ಸಿಪಿಐ ಶಂಕರ್‌ರವರು, ಪೊಲೀಸ್ ಇನ್‌ಸ್ಪೆಕ್ಟರ್, ಉಡುಪಿ ಜಿಲ್ಲೆ
✦ ಎನ್.ಪಿ. ಸತ್ಯನಾರಾಯಣ (ಸತ್ಯಿ ಬಾಬು) ಗ್ರಾ.ಪಂ. ಅಧ್ಯಕ್ಷರು, ಸಾಲಕಟ್ಟೆ ✦ ಎನ್.ಪಿ. ಸುರೇಶ್, ಕಂಟ್ರ್ಯಾಕ್ಟರ್
✦ ಮುತ್ತು, ರಿಯಲ್ ಎಸ್ಟೇಟ್ ✦ ತಿಮ್ಮಣ್ಣ, ತರಕಾರಿ ✦ ವಲಿವುಲ್ಲಾ ✦ ಸುಧಾಕರ್, ಆಟೋ ಚಾಲಕರ ಸಂಘ.
✦ ಶಾಮನೂರು ನಾಗರಾಜ್ ✦ ಶಿವಾನಂದ ಎಂ.ಎನ್. ಬೆಂಗಳೂರು ✦ ಶಿವಶರಣಪ್ಪ ಬೆಂಗಳೂರು
✦ ಆಪೆ ಗಾಡಿ ಮಂಜುನಾಥ್ ✦ ಮಡಿವಾಳರ ಸುರೇಶ್ ✦ ಶಿವು ಎಸ್.ಎಸ್. ಬಡಾವಣೆ
✦ ಬಿ.ಹೆಚ್. ರಾಘವೇಂದ್ರ ಎಸ್.ಎಸ್. ಮಾಲ್ ✦ ಬೆಳಕೇರಿ ಅಂಜಿನಪ್ಪ ✦ ಬಿ.ಎನ್. ಮಂಜುನಾಥ್
✦ ಆರ್. ಹನುಮಂತ್ ✦ ಕೆ.ಎನ್. ಹರೀಶ್ ✦ ಮಲ್ಲೇಶ್ ✦ ಕುಂದವಾಡ ಅರುಣ್
✦ ಮಹಾಂತೇಶ್ ಕೆಎಸ್‌ಆರ್‌ಟಿಸಿ ✦ ರಾಷ್ಟ್ರಪತಿ (ಪುನಿತ್) & ಫ್ರೆಂಡ್ಸ್
✦ ಎಸ್.ಎಸ್. ಮಲ್ಲಿಕಾರ್ಜುನ ಅಭಿಮಾನಿ ಯುವ ಶಕ್ತಿ ಬಳಗ (ರಿ.) ಪದಾಧಿಕಾರಿಗಳು.

**ಕಣ್ಣಾಳ ಅಂಜಿನಪ್ಪ**
ಸಂಸ್ಥಾಪಕ ಅಧ್ಯಕ್ಷರು,
ಎಸ್.ಎಸ್. ಮಲ್ಲಿಕಾರ್ಜುನ ಯುವ ಶಕ್ತಿ ಬಳಗ
ರಾಜ್ಯ ಪ್ರಧಾನ ಕಾರ್ಯದರ್ಶಿ,
ಕರ್ನಾಟಕ ರಾಜ್ಯ ದಲಿತ ಮಹಾಸಭಾ (ರಿ.), ಬೆಂಗಳೂರು.

## ಇಂದು ವಿಶ್ವಂಬರ ಹಾಡುಗಾರಿಕೆ

ಶಿವಮೊಗ್ಗದ ರವೀಂದ್ರ ನಗರದ ಶ್ರೀ ಪ್ರಸನ್ನ (ಬಲ ಮುರಿ) ಗಣಪತಿ ದೇವಸ್ಥಾನದ ಆವರಣದಲ್ಲಿ ನಿನ್ನೆಯಿಂದ ಯುವ ಸಂಗೀತೋತ್ಸವ ನಡೆಯುತ್ತಿದೆ.



ಶ್ರೀ ಗುರುಗುಹ ವಾಗ್ಗೇಯ ಪ್ರತಿಷ್ಠಾನ ಟ್ರಸ್ಟ್ ಮತ್ತು ಶ್ರೀ ಗುರುಗುಹ ಗಾನಸಭಾ ಇವರ ಜಂಟಿ ಆಶ್ರಯದಲ್ಲಿ ಈ ಕಾರ್ಯಕ್ರಮ ಏರ್ಪಾಡಾಗಿದೆ. ಇಂದು ಸಂಜೆ 7.30ಕ್ಕೆ ಏರ್ಪಾಡಾಗಿರುವ ಕಾರ್ಯಕ್ರಮವನ್ನು ದಾವಣಗೆರೆಯ ಯುವ ಪ್ರತಿಭೆ - ಸಂಗೀತ ಕಲಾವಿದ ವಿಶ್ವಂಬರ ಆರ್. ಭಾಗವತ ಮತ್ತು ತಂಡದವರು ನಡೆಸಿಕೊಡಲಿದ್ದಾರೆ.

ವಿಶ್ವಂಬರ, ದಾವಣಗೆರೆಯ ಶ್ರೀ ಶಾರದಾ ಸಂಗೀತ ಮತ್ತು ನೃತ್ಯ ಕಲಾ ಶಾಲೆಯ ವಿದುಷಿ ಪೂರ್ಣಿಮಾ ಮತ್ತು ವಿದ್ವಾನ್ ರಾಜಗೋಪಾಲ ಭಾಗವತ ದಂಪತಿ ಪುತ್ರ.

## ದುಗ್ಗಮ್ಮ ದೇವಸ್ಥಾನದ ಬಳಿ ಇಂದು ಸಂತೆ

ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನಡೆಯುವ ವಾರದ ಸಂತೆಯನ್ನು ಇಂದು ಮತ್ತು ಇದೇ ದಿನಾಂಕ 23, 30ರಂದು ಒಟ್ಟು 3 ಭಾನುವಾರಗಳಂದು ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಸ್ಥಾನದ ಆವರಣದಲ್ಲಿ ನಡೆಸಲಾಗುವುದು ಎಂದು ಪಾಲಿಕೆ ಆಯುಕ್ತರು ತಿಳಿಸಿದ್ದಾರೆ.


**Akshara Jyothi Education Trust (R.)**

**RURAL PUBLIC RESIDENTIAL SCHOOL, DIDDIGE. JAGALUR (TQ).**

**WE ARE HIRING !!**

Teachers willing to serve in rural area for the growth of rural students with high ambition, here's a great opportunity to fulfil your dreams.

"THE TEACHERS WHO ARE WORKING IN THE COMPETITIVE ENVIRONMENT WITH ZERO TO 20 YEARS OF EXPERIENCE, CAN JOIN US TO CREATE THE BETTER WORLD"

**POSITIONS AVAILABLE**

| POSTS | QUALIFICATION | NO. OF POSTS |
|---|---|---|
| English | D.Ed., B.A. B.Ed., M.A., B.Ed., | 03 |
| Hindi | D.Ed., B.A., B.Ed., M.A., B.Ed., | 03 |
| Mathematics | D.Ed., B.Sc., B.Ed., M.Sc, B.Ed., | 03 |
| Social Science | D.Ed., B.A., B.Ed., M.A., B.Ed., | 03 |
| Kinder Garten Teachers | Montessorri/D.Ed/Degree | 05 |
| Academic Co-Ordinators | B.A/B.Sc., B.Ed., | 03 |

NOTE:- ☛ Bus/van facility is available from Bilichodu & Arasikere (Harapanahalli Tq.) to school. ☛ Best opportunity for fresh college outputs. ☛ Boarding facility is available. ☛ Competitive salary will be offered to the right teachers. ☛ Teachers with required qualifications can walk in for the interview.

"Interested Teachers can attend the interview from 10.00 AM to 4.00 PM Till 31* July - 2023 (Even on Saturdays & Sundays)"


Email id: sriaksharajyothi@gmail.com

Place: RURAL PUBLIC SCHOOL, DIDDIGE., Ph.: 95350 36410



# ಹಾರ್ದಿಕ ಅಭಿನಂದನೆಗಳು





ದಾವಣಗೆರೆ ಯುಬಿಡಿಟಿ ಕಾಲೇಜಿನ ಪ್ರಾಧ್ಯಾಪಕರಾದ ಡಾ. ಮೊಹ್ಮದ್ ರಫಿ ಅವರ ಮಾರ್ಗದರ್ಶನದಲ್ಲಿ ಸಂಶೋಧನಾ ಪ್ರಬಂಧ ಮಂಡಿಸಿ, ವಿಶ್ವೇಶ್ವರ ಟೆಕ್ನಾಲಜಿ ಯುನಿರ್ವಸಿಟಿ ಬೆಳಗಾವಿ, (ಫ್ಯಾಕಲ್ಟಿ ಆಫ್ ಕಂಪ್ಯೂಟರ್ & ಇನ್ಫಾರ್‌ಮೇಷನ್ ಸೈನ್ಸ್ ವಿಭಾಗದಲ್ಲಿ) ಡಾಕ್ಟರೇಟ್ ಪದವಿ ಪಡೆದಿರುವ

**ಡಾ. ನಾಸೀರ್ ಆರ್. Ph.D**

(ಅಸಿಸ್ಟೆಂಟ್ ಪ್ರೊಫೆಸರ್, ಕಂಪ್ಯೂಟರ್ ಸೈನ್ಸ್ ಡಿಪಾರ್ಟ್‌ಮೆಂಟ್ ಬಿಐಇಟಿ, ದಾವಣಗೆರೆ.)

**ಅವರಿಗೆ ಹಾರ್ದಿಕ ಅಭಿನಂದನೆಗಳು...**

**ಶುಭ ಕೋರುವವರು : ಕುಟುಂಬ ವರ್ಗ ಮತ್ತು ಸ್ನೇಹ ವರ್ಗ**

- ಶ್ರೀ ದಿನೇಶ್ ಕೆ. ಶೆಟ್ಟಿ, ಮಹಾನಗರ ಪಾಲಿಕೆ ಮಾಜಿ ಸದಸ್ಯರು, ದಾವಣಗೆರೆ.
- ಶ್ರೀ ಅಬ್ದುಲ್ ಲತೀಫ್, ಮಹಾನಗರ ಪಾಲಿಕೆ ಸದಸ್ಯರು, ಕೆ.ಟಿ.ಜೆ. ನಗರ, ದಾವಣಗೆರೆ.
- ಶ್ರೀ ಶ್ರೀನಿವಾಸ್ ಶಿವಗಂಗಾ, ಕಾಂಗ್ರೆಸ್ ಮುಖಂಡರು, ದಾವಣಗೆರೆ.
- ಶ್ರೀ ಬಿ.ಜೆ. ರಮೇಶ್, ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾ ಕಾರ್ಯದರ್ಶಿ ಹಾಗೂ ಕಾಂಗ್ರೆಸ್ ಮುಖಂಡರು
- ಶ್ರೀ ಸಿಂಧೆರಾಜ್, ಕನ್ನಡ ಚಳುವಳಿಗಾರರು, ದಾವಣಗೆರೆ.
- ಶ್ರೀ ಮಟನ್ ಮೊಹಮ್ಮದ್ ಅಲಿ, ತಂಜೀಮ್ ಮುಸ್ಲಿಂ ಅಸೋಸಿಯೇಷನ್ ಕಮಿಟಿ ಸದಸ್ಯರು, ದಾವಣಗೆರೆ.
- ಶ್ರೀ ಟಿ. ಶಿವಕುಮಾರ್, ಕನ್ನಡ ಚಳುವಳಿಗಾರರು, ದಾವಣಗೆರೆ.
- ಶ್ರೀ ಸದಾನಂದಯ್ಯ ಮಠದ್, ಮಾಲೀಕರು, ವಿನಾಯಕ ಇಂಡಸ್ಟ್ರೀಸ್, ದಾವಣಗೆರೆ.
- ಶ್ರೀ ಬಿ.ಜೆ. ಸುನೀಲ್ ಕುಮಾರ್, ಮಾಲೀಕರು, ಜಾಜೂರು ಟ್ರೇಡರ್ಸ್, ದಾವಣಗೆರೆ.
- ಶ್ರೀ ವೀರಣ್ಣ, ಮಾಲೀಕರು, ತ್ರಿಶೂಲ್ ಚಿತ್ರಮಂದಿರ ✻ ಶ್ರೀ ಕಡತಿ ತಿಪ್ಪೇಶ್, ಕಾಂಗ್ರೆಸ್ ಮುಖಂಡರು
- ಶ್ರೀಮತಿ/ಶ್ರೀ ಮಹಾಲಿಂಗಪ್ಪ, ಛೇರ್ಮನ್, ಪುಷ್ಪ ಮಹಾಲಿಂಗಪ್ಪ ರೆಸಿಡೆನ್ಷಿಯಲ್ ಸ್ಕೂಲ್ ಮತ್ತು ಪದವಿ ಪೂರ್ವ ಕಾಲೇಜ್, ದಾವಣಗೆರೆ.
- ಶ್ರೀ ಕೊಟ್ರೇಶ್, ಮಲೇಬೆನ್ನೂರು, ಚಿತ್ರಮಂದಿರ ಮಾಲೀಕರು ✻ ಶ್ರೀ ಗಣೇಶ್ ತಾಳದ್, ರೈಸ್ ಮರ್ಚೆಂಟ್, ದಾವಣಗೆರೆ.
- ಶ್ರೀ ಬಿಸನಾಳ ವಿಜಯ್‌ಕಮಾರ್, ಸುಜಾತ ಎಲೆಕ್ಟ್ರಿಕಲ್, ದಾವಣಗೆರೆ.

- ತಂದೆ-ತಾಯಿಗಳಾದ : ಶ್ರೀಮತಿ ಫರೀದಾ ಬಾನು ಶ್ರೀ ವೈ.ಎನ್. ರಾಜಾಸಾಬ್,
- ಶ್ರೀಮತಿ/ಶ್ರೀ ನೂರ್ ಮೊಹಮ್ಮದ್, APMC, ಬಳ್ಳಾರಿ.
- ಶ್ರೀಮತಿ/ಶ್ರೀ ವೈ.ಬಿ. ಯಾಸೀನ್ ಅಲಿ, ಕಾನೂನು ಮಾಪನ ಇಲಾಖೆ, ದುರಸ್ತಿದಾರರು, ಚಿತ್ರದುರ್ಗ.
- ಶ್ರೀಮತಿ ನಫೀಸಾ ಬೇಗಂ, ಅಸಿಸ್ಟೆಂಟ್ ಇಂಜಿನಿಯರ್, ನೀರಾವರಿ ಇಲಾಖೆ, ದಾವಣಗೆರೆ.
- ಶ್ರೀಮತಿ/ಶ್ರೀ ವಜೀರ್ ಅಹಮದ್, ಮಾಲೀಕರು, ಮೊಬೈಲ್ ಜಂಕ್ಷನ್, ಚಿತ್ರದುರ್ಗ.
- ಶ್ರೀಮತಿ/ಶ್ರೀ ಮಸೂದ್ ಅಹಮದ್ ಕೆ.ಹೆಚ್., ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜ್, ಭರಮಸಾಗರ.
- ಶ್ರೀಮತಿ/ಶ್ರೀ ಮನ್ಸೂರ್ ಆರ್., MRF ಸ್ಕೇಲ್ಸ್, ಚಿತ್ರದುರ್ಗ. ಹಾಗೂ ಸ್ಪಂದನಾ ಬಳಗದ ಸ್ನೇಹಿತರು ಹಾಗೂ ಬಂಧು-ಬಳಗದವರು









